ಹಂಪಿ ಕನ್ನಡ ವಿಶ್ವವಿದ್ಯಾಲಯ

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

ವಿಷಯ: ಡಾ.ಎನ್ ಗಾಯಿತ್ರಿಯವರ ಸಾಹಿತ್ಯದಲ್ಲಿ ಮಹಿಳಾ ಚಿಂತನೆ

ಸಂಶೋಧನಾ ವಿದ್ಯಾರ್ಥಿ

ವಿನೋದ

ಹಂಪಿ ವಿಶ್ವವಿದ್ಯಾಲಯ

(ರಿ. ನಂ: 172001030041)

ಮಾರ್ಗದರ್ಶಕರು

ಡಾ॥ ಹನುಮಂತರಾಯಪ್ಪ .ಎಚ್

ಕನ್ನಡ ಸಹ ಪ್ರಾಧ್ಯಾಪಕರು

ಸರ್ಕಾರಿ ಕಲಾ ಕಾಲೇಜು, ಬೆಂಗಳೂರು

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು,

'ಸಂಶೋಧನಾ ಕೇಂದ್ರ',

ಚಾಮರಾಜಪೇಟೆ, ಬೆಂಗಳೂರು–560 018.

2017–2018

ಹಂಪಿ ಕನ್ನಡ ವಿಶ್ವವಿದ್ಯಾಲಯ

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

ವಿಷಯ: ಡಾ.ಎನ್ ಗಾಯಿತ್ರಿಯವರ ಸಾಹಿತ್ಯದಲ್ಲಿ ಮಹಿಳಾ ಚಿಂತನೆ

ರಿಜಿಸ್ಟರ್ ನಂ: 172001030041

ಮಾನ್ಯತಾ ಸಂಸ್ಥೆ
ಕನ್ನಡ ಸಾಹಿತ್ಯ ಪರಿಷತ್ತು,
'ಸಂಶೋದನಾ ಕೇಂದ್ರ',
ಚಾಮರಾಜಪೇಟೆ, ಬೆಂಗಳೂರು–560 018.

2017–2018



ಡಾ|| ಎಸ್. ಗಾಯಿತ್ರಿ

ದಿನಾಂಕ:17–01–1957

ಮಾರ್ಗದರ್ಶಕರ ದೃಡೀಕರಣ ಪತ್ರ

ವಿನೋದ ಅವರು, ಎಂ.ಫಿಲ್ ಪದವಿಗಾಗಿ ಬರೆದು ಸಿದ್ದಪಡಿಸಿರುವ **' ಡಾ॥ ಎನ್. ಗಾಯಿತ್ರಿಯವರ ಸಾಹಿತ್ಯದಲ್ಲಿ ಮಹಿಳಾ ಚಿಂತನೆ'** ಒಂದು ಅಧ್ಯಯನ ಎಂಬ ಸಂಪ್ರಬಂಧವನ್ನು ಹಂಪಿ ವಿಶ್ವ ವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ದಪಡಿಸಿರುತ್ತಾರೆ. ಈ ಸಂಪ್ರಬಂಧ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರೆ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢಿಕರಿಸಿರುತ್ತೇನೆ.

ದಿನಾಂಕ:

ಸ್ಥಳ:

ಡಾ॥ ಹನುಮಂತರಾಯಪ್ಪ. ಎಚ್

Dr. H. Hanumantharayappa

ಮಾರ್ಗದರ್ಶಕರು M.A., Ph.D.,

Associate Professor in Kannada

Govt. Arts College, Bengaluru-560 001.

<u>ಸಂಶೋಧನಾ ವಿದ್ಯಾರ್ಥಿಯ ಪ್ರಮಾಣಪತ್ರ</u>

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಗಾಗಿ ಸಂಶೋಧನೆನಡೆಸಿ **"ಡಾ॥ ಎನ್ ಗಾಯಿತ್ರಿಯವರ ಸಾಹಿತ್ಯದಲ್ಲಿ ಮಹಿಳಾ ಚಿಂತನೆ"** ಎಂಬ ಶೀರ್ಷಿಕೆಯ ಈ ನಿಬಂಧವನ್ನು **ಡಾ॥ ಹನುಮಂತ ರಾಯಪ್ಪ** ರವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿರುತ್ತೇನೆ ಈ ನಿಬಂಧವನ್ನು ಈ ಮೊದಲು ಭಾಗಶಃ ಆಗಲಿ ಪೂರ್ಣವಾಗಿ ಆಗಲಿ ಬೇರೆ ಯಾವುದೇ ಪದವಿ ಹಾಗೂ ಇನ್ನಿತರ ಸ್ವಂತ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಈ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಈ ಮೂಲಕ ಸಲ್ಲಿಸುತ್ತಿದ್ದೇನೆ.

ವಿನೋದ

ದಿನಾಂಕ:

ಸ್ಥಳ:ಬೆಂಗಳೂರು

ಸಂಶೋಧಕರು
(ವಿನೋದ)
ಎಂ.ಫಿಲ್ ವಿಧ್ಯಾರ್ಥಿ
ಹಂಪಿ ಕನ್ನಡ ವಿಶ್ವವಿದ್ಯಾಲಯ
ಬೆಂಗಳೂರು

ಅಧ್ಯಯನದ ಸಂದರ್ಭದಲ್ಲಿ ಸಹಾಯ ಮಾಡಿದ ನನ್ನ ಸಹೋದ್ಯೋಗಿಗಳಾದ **ಮಮತಾ ಸಾಲಿಮಠ, ಕುಸುಮ, ರಮ್ಯಾ ಎಲ್.ಪಿ, ಮತ್ತು ಸಂಮ್ರಿನ್ ಎ.ಆರ್** ಇವರಿಗೂ, ನನ್ನ ಅಪಾರ ಸ್ನೇಹ ಬಳಗ ಇವರಿಗೂ

ಈ ನಿಬಂಧ ಅಂದವಾಗಿ ಅಕ್ಷರ ರೂಪದಲ್ಲಿ ಹೊರಬರಲು ಕಾರಣರಾದ **ಹರ್ಷಕಂಪ್ಯೂಟರ್** ಬೆಂಗಳೂರು ಸಿಬ್ಬಂದಿಯಾದ **ಯಶೋಧಮ್ಮ**ನವರಿಗೂ ನನ್ನ ಕೃತಜ್ಞತೆಗಳು

ದಿನಾಂಕ:

ಸ್ಥಳ:ಬೆಂಗಳೂರು **ವಿನೋದ**

ಪರಿವಿಡಿ

ಅಧ್ಯಾಯ–1
ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ-1
ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪೀಠಿಕೆ

ಭಾರತೀಯ ಸಾಂಸ್ಕೃತಿಕ ಚರಿತ್ರೆ ಹೆಣ್ಣಿಗೊಂದು ವಿಶಿಷ್ಟ ಸ್ಥಾನ ನೀಡಿ ಕೊಂಡೇ ಬಂದಿದೆ ಇಲ್ಲಿ ವಿಶಿಷ್ಟ ಎಂದರೆ ಒಂದೆಡೆ ಪೂಜಾರ್ಹಳೂ ಆದ ಹೆಣ್ಣು ಮತ್ತೊಂದೆಡೆ ತುಳಿತಕ್ಕೂ ಒಳಗಾದಳೂ ಆದರೆ ತನ್ನನ್ನು ಪುರುಷ ಪ್ರಧಾನ ಸಂಸ್ಕೃತಿ ತುಳಿಯುತ್ತಿದೆ ಎನ್ನುವ ಅರಿವು ಮೂಡಿದ್ದು ಇತ್ತೀಚೆಗೆ. ಆದರೆ ಹಿಂದೆ ಯಾರೂ ಪುರುಷ ಪ್ರಧಾನ ಸಂಸ್ಕೃತಿಯ ವಿರುದ್ಧ ಸೆಟೆದು ನಿಂತಿರಲಿಲ್ಲ ಎಂದು ಹೇಳಲಾಗದು.

ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ವಿವೇಚನೆ ಬಹುಮುಖಿ ವಿಚಾರ ನೆಲೆಗಳಲ್ಲಿ ಕವಲೊಡೆಯುತ್ತದೆ. ಮಹಾ ಭಾರತದಲ್ಲಿ ದ್ರೌಪದಿಯಂತವಳು ಪತಿಯನ್ನು ಸಭಾಸದರನ್ನು ರಾಜತ್ವವನ್ನೇ ಪ್ರಶ್ನಿಸಿದ್ದಳು ಗಾರ್ಗಿ, ಮೈತ್ರೇಯಂತಹ ಮೇದಾವಿಗಳೂ ಕ್ರಿಸ್ತ ಪೂರ್ವದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದರು ವೇದಗಳಲ್ಲಿ ಉಪನಿಷತ್ತುಗಳಲ್ಲಿ ಸ್ತ್ರೀಯನ್ನು ಶೋಷಿಸುವ ವಿಧಾನ ಪ್ರಾರಂಭವಾಯಿತೆನ್ನಬಹುದು.

" ಕಾರ್ಯೇಷದಾಸಿ, ಕರುಣೇಶು ಮಂತ್ರಿ, ಭೋಜ್ಯೇಷು
ಮಾತಾ, ರೂಪೇಷು ಲಕ್ಷ್ಮೀ, ಶಯನೇಷು ರಂಭಾ
ಕ್ಷಮೆಯಾಧರಿತ್ರಿ"

ಈ ಲೋಕದ ಗಂಡದಿರನ್ನು ಅಲ್ಲಗಳೆಯುವ ಮೂಲಕ ಇಡೀ ಪುರುಷ ಸಮಾಜವನ್ನು ದಿಕ್ಕರಿಸಿದ್ದಾಳೆ. ಸಾವಿಲ್ಲದ ಗಂಡನನ್ನು ಹುಡುಕುವ ಆಕೆಯ ಹಂಬಲ ಪುರುಷ ನಿರ್ಮಿತ ಸಮಾಜದ ಚೌಕಟ್ಟನ್ನು ಮೀರುವುದಾಗಿದೆ ಹೀಗಾಗಿ ಅಕ್ಕನ ಹುಟ್ಟಿನಲ್ಲಿ ಮಹಿಳೆಯ ಬಿಡುಗಡೆ ಕಾಣುವುದು ಮತ್ತು ಆಕೆಯ ನಿಲುವಿನಲ್ಲಿ ಸ್ತ್ರೀಪರ ಕಾಳಜಿ ಗುರುತಿಸುವುದು ಅಕ್ಕನನ್ನು ಮಹಿಳಾವಾದಿಯೆಂದು ಸಾದ್ಯವಾಗಿರುವುದು .

ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ, ಕದಿರ ರೆಮ್ಮವ್ವ, ಸೂಳೆ ಸಂಕವ್ವ, ಗೊಗ್ಗವ್ವೆ ಮುಂತಾದವರ ವಚನಗಳ ಬೆಂಕಿಯ ಉಂಡೆಯಂತೆ ಪ್ರಕಾರಗೊಂಡಿವೆ.

ಅಕ್ಕಮಹಾದೇವಿ ನಂತರ ಕನ್ನಡದಲ್ಲಿ ಹೆಸರಿಸಬೇಕಾದ ಮತ್ತೊಬ್ಬ ಕವಯಿತ್ರಿ ಸಂಚಿಹೊನ್ನಮ್ಮ ಅವಳ 'ಹದಿಬದೆಯ ಧರ್ಮ' ದಾಂಪತ್ಯ ಜೀವನವನ್ನು ಹೆಣ್ಣಿನ ಹೊಣೆಗಾರಿಕೆಯನ್ನು ಸ್ತ್ರೀ ಸ್ಥಾನಮಾನವನ್ನು ಅರ್ಥಪೂರ್ಣವಾಗಿ ಕಟ್ಟಿಕೊಡುವ ಗಮನಾರ್ಹ ಕೃತಿ ಸಮಾಜದಲ್ಲಿ ಹೆಣ್ಣಿನ ಬಗ್ಗೆಯಿದ್ದ ತಪ್ಪು ಕಲ್ಪನೆಯನ್ನು ಹೋಗಲಾಡಿಸಿ ಆಕೆಗೆ ಗೌರವಯುತ ಮರ್ಯಾದೆಯನ್ನು ದೊರಕಿಸುವ ಯತ್ನ ಸಂಚಿ ಹೊನ್ನಮ್ಮನದು ಮಹಿಳೆಯನ್ನು ಶೋಷಿಸುತ್ತಲೇ ಬಂದಿರುವ ಪುರುಷ ವರ್ಗದ ದೌರ್ಜನ್ಯ ನಮ್ಮ ಸಾಂಸ್ಕೃತಿಕ ಅಮಾನವೀಯ ಕೃತ್ಯವೆಂದೇ ಹೇಳಬೇಕು.

ಎಂದು ಹೆಣ್ಣಿನ ವಿವಿಧ ಮುಖಗಳನ್ನು ಹಾಡಿ ಹೆಣ್ಣುಗಳಿಂದ ದೇಶದ ಸಾಂಸ್ಕೃತಿಕ ಚರಿತೆ ಮುಂದೆ ಇದೇ ಹೆಣ್ಣನ್ನು ನಾಲ್ಕು ಗೋಡೆಯ ಮಧ್ಯ ಬಂದಿಸಿದ್ದು ವಿಪರ್ಯಾಸ ಒಂದು ಹೆಣ್ಣಿನಲ್ಲಿ ಈ ಆರು ಗುಣಗಳನ್ನು ನಿರೀಕ್ಷಿಸುವ ಈ ಪುರುಷ ಪ್ರಧಾನ ಸಮಾಜ ಗಂಡಿಗೆ ಯಾವುದಾದರೂ ವಿಧಿ ವಿಧಾನಗಳನ್ನು ಹೇಳಿಲ್ಲ ಎನ್ನುವುದು ವಿಪರ್ಯಾಸವೇ ಸರಿ ಅಕ್ಷರ ಕಲಿಕೆಯಿಂದ ದೂರವಿರಿಸಿ ಅಡುಗೆ ಮನೆ ಹಾಗೂ ಗಂಡಿನ ಲೈಂಗಿಕ ತೃಷೆಯನ್ನು ತೀರಿಸಲು ಮಕ್ಕಳನ್ನು ಹೆತ್ತು ಪೋಷಿಸಲು ಅವಳು ಬದುಕನ್ನು ಸಂಕುಚಿತಗೊಳಿಸಲಾಯಿತು. ಬ್ರಾಹ್ಮಣ ಮತ್ತು ಉಪನಿಷತ್ತುಗಳಿಂದ ವರ್ಣಾಶ್ರಮ ರೂಪುಗೊಂಡು ಬ್ರಾಹ್ಮಣರು ತಮ್ಮ ಹೊಟ್ಟೆ, ಬಟ್ಟೆಗಾಗಿ, ವರ್ಗ, ತಾರತಮ್ಯ ರೂಪಿಸಿಕೊಂಡು ಸ್ತ್ರೀಯರನ್ನು ಕೀಳಾಗಿ ಕಾಣುವ ಪ್ರವೃತ್ತಿ ಬೆಳೆಯಿತು ಆದರ ಈ ತಾರತಮ್ಯ ಮೇಲ್ವರ್ಗದಲ್ಲಿ ಹೆಚ್ಚಿಗೆ ಇದ್ದಂತೆ ಕಂಡು ಬರುತ್ತದೆ.

ವೈದಿಕ ವ್ಯವಸ್ಥೆ ಹೆಣ್ಣನ್ನು ಅಡುಗೆ ಮನೆಯಲ್ಲಿಯೇ ಉಳಿಸಿ ಕೊಳೆತು ನಾರುವಂತೆ ಶ್ರೀಮಂತರ ಭೋಗಲಾಸೆಯ ವಸ್ತುವಾಗಿ, ತನ್ನ ನೋವನ್ನು ತಾನೇ ನುಂಗಿ ಬದುಕಿಸುವಂತೆ ಮಾಡಿತ್ತು ಮನುಸ್ಮೃತಿ ಹೆಣ್ಣು ಅಶುಭಳೆಂದು ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದು ಆಕೆಗೆ ಪತಿ ಸೇವೆಯ ಮೂಲಕವೇ ಸ್ವರ್ಗ ಪ್ರಾಪ್ತಿಯೆಂದು ಹೇಳಿ ಅವಳನ್ನು ಅಧಿಕಾರ ವಂಚಿತಳನ್ನಾಗಿ ಮಾಡಿತ್ತು. ನಮ್ಮ ಸಂಸ್ಕೃತಿ, ಸಮಾಜವೂ ಕೂಡಾ ಹೆಣ್ಣಿನ ಬಗ್ಗೆ ಉದಾರ ನಿಲುವು ತೋರಿದಂತೆ ಎಲ್ಲೂ ಕಂಡು ಬರುವುದಿಲ್ಲ ಇಂತಹ ಸಂದರ್ಭದಲ್ಲಿ ಮೊಟ್ಟ ಮೊದಲ ಬಾರಿಗೆ ಸಾಹಿತ್ಯಿಕವಾಗಿ, ಸಾಮಾಜಿಕಾವಾಗಿ ಸಮಾಜದ ವಿರುದ್ಧ ದನಿ ಮೂಡಿಸಿದ್ದು ಪ್ರತಿಭಟಿಸಿದ್ದು 12 ನೇ ಯ ಶತಮಾನದ ಅಕ್ಕ ಮಹಾದೇವಿ

ಸ್ತ್ರೀ ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲ ಎಂಬುದನ್ನು ಸಾರುತ್ತಾ ಬಂದಿರುವ ಹಿಂದೂ ಧರ್ಮಕ್ಕೆ ಪ್ರತಿರೋದ ಒಡ್ಡುತ್ತಾ ಬಂದ ಬೇರ ಧರ್ಮಗಳು ಮಹಿಳೆಗೆ ಸಂಪೂರ್ಣವಾಗಿ ಸ್ವಾತಂತ್ರ್ಯ ಕಲ್ಪಿಸುವ ಪ್ರಯತ್ನ ಮಾಡಿರಲಿಲ್ಲ ಯಜಮಾನ ಸಂಸ್ಕೃತಿಯ ವಿರುದ್ಧ ಮೊಟ್ಟ ಮೊದಲು ಪ್ರತಿಭಟಿಸಿದ ಶ್ರೇಯಸ್ಸು ವಚನಕಾರ್ತಿಯರಿಗೆ ಸಲ್ಲುತ್ತದೆ.

ಬಸವಾದಿ ಶರಣರು ಮಹಿಳೆಗೆ ಪೂರ್ಣ ಪ್ರಮಾಣದಲ್ಲಿ ಸ್ವಾತಂತ್ರ್ಯ ದೊರಕಿಸುವಲ್ಲಿ ಸ್ವಲ್ಪ ಮಟ್ಟಿಗೆ ಸಫಲವಾಗಿದ್ದರು ಈ ಶರಣರ ಕೂಟದಲ್ಲಿಯೇ ವಿಶಿಷ್ಟವಾಗಿ ಕಾಣುವ ಅಕ್ಕ ಏಕಾ ಕಾಲದಲ್ಲಿ ರಾಜಸತ್ತೆ ಮತ್ತು ಪ್ರಜಾಸತ್ತೆಯ ಬಂಧನದಿಂದ ಬಿಡುಗಡೆಗೊಂಡು ಹೆಣ್ಣಿನ ಪ್ರತಿನಿದಿಯಾಗಿದ್ದಾಳೆ. ಆಕೆ ಕೇವಲ ಹೆಣ್ಣಿನ ಮೇಲಿನ ದೌರ್ಜನ್ಯ ಮಾತ್ರ ಖಂಡಿಸದೆ ಅಂದಿನ ಹಲವು ಕಂದಾಚಾರಗಳು ನಂಬಿಕೆಗಳನ್ನು ವಿರೋಧಿಸಿದ್ದಾಳೆ.

ಅಕ್ಕಮಹಾದೇವಿ ಕೇವಲ ಪ್ರಭು ಸಂಸ್ಕೃತಿಯನ್ನು ಮೀರಿ ಬಂದವಳಲ್ಲ ತನ್ನ ಆಯ್ಕೆಯ ಹಕ್ಕನ್ನು ಬಳಸಿಕೊಂಡು ತನ್ನ ಆರಾದ್ಯ ದೈವ ವನ್ನು ಗಂಡನೆಂದು ಆತನನ್ನು ಹುಡುಕುತ್ತಾ ಬಂದವಳು.

ಸಾವಿಲ್ಲದ, ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವ,
ಎಡೆಯಿಲ್ಲದ, ಕಡೆಯಿಲ್ಲದ, ತೆರಹಿಲ್ಲದ, ಕುರುಹಿಲ್ಲದ ಚಲುವಂಗಾನೊಲಿದೆ.
ಎಲೆ ಅವ್ವ ....ಕೇಳು ತಾಯಿ
ಈ ಸಾವಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.........

(ಅಕ್ಕಮಹಾದೇವಿ)

ಈ ಲೋಕದ ಗಂಡಂದಿರನ್ನು ಅಲ್ಲಗಳೆಯುವ ಮೂಲಕ ಇಡೀ ಪುರುಷ ಸಮಾಜವನ್ನು ದಿಕ್ಕರಿಸಿದ್ದಾಳೆ. ಸಾವಿಲ್ಲದ ಗಂಡನನ್ನು ಹುಡುಕು ಆಕೆಯ ಹಂಬಲ ಪುರುಷ ನಿರ್ಮಿತ ಸಮಾಜದ ಚೌಕಟ್ಟನ್ನು ಮೀರುವುದಾಗಿದೆ. ಹೀಗಾಗಿ ಅಕ್ಕನ ಹುಟ್ಟಿನಲ್ಲಿ ಮಹಿಳೆಯ ಬಿಡುಗಡೆ ಕಾಣುವುದು ಮತ್ತು ಆಕೆಯ ನಿಲುವಿನಲ್ಲಿ ಮಹಿಳೆಯ ಪರಶ

“ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು
ಸಂಚಿ ಹೊನ್ನಮ್ಮ

(ಸಂಚಿ ಹೊನ್ನಮ್ಮ)

ಹದಿಬದೆಯ ಧರ್ಮ ಪ್ರಮುಖವಾಗಿ ಹೆಣ್ಣಿನ ಧರ್ಮವನ್ನು ಬಿಂಬಿಸುವ ಜಾನಪದ ಸಾಹಿತ್ಯವೆನಿಸಿದ, ಸಾಮಾಜಿಕ ಬದುಕನ್ನು ಕಟ್ಟಿಕೊಡುವಲ್ಲಿ ಕಾವ್ಯ ನಿಷ್ಠುರವಾಗಿ ನುಡಿಯುವುದರಿಂದ ನೋಡುಗರ ದೃಷ್ಟಿಯಿಂದ ಸ್ತ್ರೀ ವಾದಿಯೆನಿಸಿದರೆ ಅಸಮಂಜಸವೇನಲ್ಲ ಹೆಣ್ಣಿಂದಲೇ ಹುಟ್ಟಿ ಅವಳಿಂದಲೇ ಬೆಳೆದು ಅವಳನ್ನೆಲ್ಲಾ ಹೀನವಾಗಿ ಕಾಣುವುದು ನಮ್ಮ ಅಮಾನವೀಯ ಮುಖವನ್ನೆ ತೋರಿಸುತ್ತದೆ. ಹೀಗೆ ಸ್ತ್ರೀ ಪರ ಚಿಂತಿಸುವ ಹದಿಬದೆಯ ಧರ್ಮ ನಮ್ಮ ಸಾಹಿತ್ಯ ಲೋಕಕ್ಕೆ ಅಮೂಲ್ಯವಾದದು.

ಈ ಇಬ್ಬರು ಕವಿಯಿತ್ರಿಯರಂತೆ ಮಹಿಳೆ ನಿರರ್ಗಳವಾಗಿ ಮಾತನಾಡಿದ್ದು ಅನ್ಯಾಯದ ವಿರುದ್ಧ ಪ್ರತಿಭಟಿಸಿದ್ದು ಮಹಿಳಾ ಸಾಹಿತ್ಯದ ಸಂಬರ್ಧದಲ್ಲಿ ಇಲ್ಲಿ ಎನ್ ಗಾಯಿತ್ರಿಯವರು ಮಹಿಳೆಯರ ನೋವು ಸಂಕಟವನ್ನು ಅನ್ಯಾಯವನ್ನು ತಮ್ಮ ಮಹಿಳಾ ಸಾಹಿತ್ಯದ ಮೂಲಕ ಹೊರ ತಂದಿದ್ದಾರೆ ಆ ಮೂಲಕ ವ್ಯವಸ್ಥೆಯನ್ನು ಮೌಲ್ಯವನ್ನು ನಿರಾಕರಿಸಿದ್ದಾರೆ. ಸಂಪ್ರದಾಯ ಕಟ್ಟು ಪಾಡುಗಳ ಹಿನ್ನಲೆಯಲ್ಲಿ ಪೌರಣಿಕ ಶೋಷಣೇಯ ನೆಲೆಯಲ್ಲಿ ಪುರುಷ ಪ್ರಾಧಾನ್ಯತೆಯ ಅಧೀನತೆಯಲ್ಲಿ ವಿಧವೆಯ ಸ್ಥಿತಿಯಲ್ಲಿ ಸಹಗಮನ ಹಾಗೂ ಆತ್ಮಹತ್ಯೆಯ ನೆಲೆಯಲ್ಲಿ ಹೀಗೆ ಹತ್ತು ಹಲವು ವಿಧಗಳಲ್ಲಿ ಹೆಣ್ಣಿನ ಮೇಲಾದ ಅನ್ಯಾಯವನ್ನು ನಿರಂಬಳವಾಗಿ ವಿರೋಧಿಸಿದ್ದಾರೆ. ಅದಕ್ಕೆ ತಾನು ಪಡೆದ ಆಧುನಿಕ ಶಿಕ್ಷಣದ ಪ್ರಭಾವ, ಮಹಿಳಾ ಚಳುವಳಿಗಳು ಸಂಘಟನೆಗಳು ಮುಂತಾದವುಗಳು ಹೀಗೆ ಮಹಿಳಾ ಸಾಹಿತ್ಯವು ಅವಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಪೂರ್ಣ ಸಮ್ಮತಿ ನೀಡಿದೆ ಅದನ್ನು ಅವರ ಸಾಹಿತ್ಯದಲ್ಲಿಯೇ ನೋಡಬಹುದಾಗಿದೆ.

ಅಧ್ಯಯನದ ಉದ್ದೇಶ.

ಎನ್ ಗಾಯಿತ್ರಿಯವರ ಸಾಹಿತ್ಯದಲ್ಲಿ ಮಹಿಳಾ ಚಿಂತನೆ ಈ ವಿಷಯದಲ್ಲಿ ಕೈಗೆತ್ತಿಕೊಂಡಿರುವ ಅಧ್ಯಯನವು ಸಾಮಾಜಿಕ, ಕೌಟುಂಬಿಕ, ಧಾರ್ಮಿಕ, ಔದ್ಯೋಗಿಕ, ಸಾಂಸ್ಕೃತಿಕ, ಶೈಕ್ಷಣಿಕ ಹೀಗೆ ಎಲ್ಲಾ ಕ್ಷೇತ್ರದಲ್ಲಿಯೂ ಅವಮಾನ, ಶೋಷಣೆಯನ್ನು ಸಹಿಸಿಕೊಂಡು ಬಂದಿದ್ದು, ಅದರ ವಿರುದ್ಧ ಧ್ವನಿಯೆತ್ತುವ ಪ್ರತಿಭಟಿಸುವ ಜೊತೆಗೆ ತನ್ನ ನೆಲೆಯನ್ನು ಕಂಡುಕೊಳುವ ಅರ್ಥ ವ್ಯಾಪ್ತಿಯನ್ನು ಉದ್ದೇಶವನ್ನು ಒಳಗೊಂಡಿದೆ ಜೊತೆಗೆ ಮಹಿಳೆ ಎಲ್ಲಾ ವ್ಯವಸ್ಥೆಯಿಂದ ಮುಕ್ತಿ ಪಡೆಯುವ ಬಂಧನದಿಂದ ಬಿಡುಗಡೆಯಾಗುವ ವಿಭಿನ್ನ ದೃಷ್ಟಿ ಕೋನದಿಂದ ನೋಡುವಂತಹ ನಿಟ್ಟಿನಲ್ಲಿ ನನ್ನ ಈ ಅಧ್ಯಯನ ಒಂದು ಚಿಕ್ಕ ಪ್ರಯತ್ನವಾಗಿದೆ.

ಸುಧೀರ್ಘ ಪರಂಪರೆಯನ್ನು ಪಡೆದು ಕೊಂಡಿರುವ ಮಹಿಳಾ ಸಾಹಿತ್ಯದಲ್ಲಿ ಮಹಿಳಾ ಲೇಖಕಿಯರ ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ಮಹಿಳೆಯರ ಬಗ್ಗೆ ಲೇಖಕಿಯ ಚಿಂತನೆಗಳನ್ನು ಗುರುತಿಸುವಂತಹ ಕಾರ್ಯವನ್ನು ಕೈಗೊಂಡಿದ್ದೇನೆ ಸಮಾಜದಲ್ಲಿ ಶೋಷಣೆಗೆ ಪ್ರಮುಖವಾಗಿ ಒಳಗಾದವಳು ಮಹಿಳೆಯ ಒಳ ಮನಸ್ಸಿನ ಆತಂಕಗಳನ್ನು, ಅಭಿವ್ಯಕ್ತಿಯನ್ನು ತಿಳಿಸುವಲ್ಲಿ ಈ ಒಂದು ಮಹಿಳಾ ಸಾಹಿತ್ಯವು ಅವಕಾಶ ನೀಡಿದೆ ಈ ಅವಕಾಶವನ್ನು ಸದುಪಯೋಗಿಸಿಕೊಂಡ ನಮ್ಮ ಪ್ರಪಂಚದ ಅರಿವು ಮೂಡಿಸಿದರು ಸಮಾಜ ಸಾಂಸ್ಕೃತಿಕ ಧರ್ಮ ಪುರುಷತ್ವ ಉದ್ಯೋಗ ಎಲ್ಲದರಿಂದಲೂ ಶೋಷಣೆಗೆ ಒಳಗಾಗಿರುವ ಚಿಂತನೆಯನ್ನು ಕುರಿತು ಅಧ್ಯಯನ ಮಾಡಲು ಪ್ರಯತ್ನಿಸಿದ್ದೇನೆ.

ನಮ್ಮ ಸಂಪ್ರದಾಯ ಸಮಾಜದಲ್ಲಿ ಗೌರವವಾಗಿ ಪೂಜಿಸಲ್ಪಡುತ್ತಿದ್ದ ಮಹಿಳೆ ಇಂದು ವ್ಯವಹಾರದ ವಸ್ತುವಾಗಿದ್ದಾಳೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತನ್ನ ಆಶೋತ್ತರಗಳನ್ನು ಬದಿಗೊತ್ತಿ ಕುಟುಂಬದ ಸಮಾಜದ ಒಳತಿಗಾಗಿ ಹೆಣಗುತ್ತಿದ್ದಾಳೆ. ತನ್ನ ಭಾವನೆಗಳನ್ನು ಅದುಮಿಟ್ಟುಕೊಂಡು ಪುರುಷ ನಿರ್ಮಿತ ಸಮಾಜದಲ್ಲಿ ಆ ಎಲ್ಲಾ ನಂಬಿಕೆಗಳನ್ನು ನಿಯಮಗಳನ್ನು ಪಾಲಿಸುತ್ತಾ ಬದುಕು ನಡೆಸುತ್ತಿದ್ದಾಳೆ. ಆದರೆ ಇವೆಲ್ಲದರ ಮಧ್ಯೆಯೂ ಪ್ರಸ್ತುತ ಕೌಟುಂಬಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ಮೂಕವೇದನೆ ಅನುಭವಿಸುತ್ತಾಳೆ.

ಸಾಹಿತ್ಯ ಕ್ಷೇತ್ರದಲ್ಲಿಯೂ ಕೂಡಾ ಪುರುಷನೇ ತನ್ನ ಪರಿಧಿಯೊಳಗೆ ಸಾಹಿತ್ಯ ಸಮಾಜ ರೂಪಿಸಿಕೊಂಡಿರುವುದು ವಿಪರ್ಯಾಸ ಸಾಹಿತ್ಯ ಪ್ರಾರಂಭದಿಂದ ಹಿಡಿದು ಮಹಿಳಾ ಸಾಹಿತ್ಯದವರೆಗೆ ಹೆಣ್ಣನ್ನು ಕೇವಲ ಭೋಗದ ಕಾಮದ ವಸ್ತುವಾಗಿ ಕಂಡು ಕೊಂಡಿದ್ದ ಸಮಾಜಕ್ಕೆ ಎದುರು ನಿಲ್ಲುವಂತಹ ಮನೋಧರ್ಮ ಕಂಡುಕೊಂಡಿದ್ದು ಮಹಿಳಾ ಸಾಹಿತ್ಯ ಸಂದರ್ಭದಲ್ಲಿ ಮಾತ್ರ ಮಹಿಳೇ ಗಂಭೀರವಾಗಿ ಮಹಿಳಾ ಸಾಹಿತ್ಯ ಬರೆಯಲು ತೊಡಗಿದಾಗಲೇ ಅದಕ್ಕೊಂದು ಸ್ಥಾನ ಸಿಕ್ಕಂತಾಯಿತು ನಿರಂತರವಾಗಿ ಎದುರಾಗುತ್ತಿದ್ದ ಶೋಷಣೆಯನ್ನು ಬಲವಾಗಿ ಖಂಡಿಸುವ, ತಮ್ಮ ಭಾವನೆಗಳಿಗೆ ತಕ್ಕಂತೆ ಬದುಕುರೂಪಿಸಿಕೊಳ್ಳಲು ಹೋರಾಟ ಅನಿವಾರ್ಯವೆಂದುಕೊಂಡು ಕಾರ್ಯೋನ್ಮಕ್ತಳಾಗಿದ್ದಾಳೆ. ಹಾಗೇ ಎನ್ ಗಾಯಿತಿಯವರು ತಮ್ಮ ಸ್ತ್ರೀಪರ ಕಾಳಜಿಯನ್ನು, ಚಿತಂನೆಗಳನ್ನು ಕುರಿತು ಅಭಿವ್ಯಕ್ತಿಸಿದ್ದಾರೆ ಅಂತೆಯೇ ಆ ಮೂಲಕ ಮಹಿಳೆಯ ಸ್ವಾತಂತ್ರ್ಯಯಕ್ಕೆ ಸಮಾನತೆಗೆ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕೆ ಒತ್ತಾಯಿಸಿದ್ದಾರೆ, ಪ್ರೋತ್ಸಾಹಿಸಿದ್ದಾರೆ, ಬೆಂಬಲಿಸಿದ್ದಾರೆ, ಅವರ ಚಿಂತನೆಗಳನ್ನು, ಸಂವೇದನೆಯನ್ನು ಕುರಿತು ಅಧ್ಯಯನ ಮಾಡಬೇಕೆಂದು ಸದುದ್ದೇಶವೇ ನನ್ನ ಅಧ್ಯಯನದ ಕೇಂದ್ರ ಬಿಂದುವಾಗಿದೆ.

ಮಹಿಳೇ ಗಂಭೀರವಾಗಿ ಮಹಿಳಾ ಸಾಹಿತ್ಯ ಬರೆಯಲು ತೊಡಗಿದಾಗಲೇ ಅದಕ್ಕೊಂದು ಸ್ಥಾನ ಸಿಕ್ಕಂತಾಯಿತು ನಿರಂತರವಾಗಿ ಎದುರಾಗುತ್ತಿದ್ದ ಶೋಷಣೆಯನ್ನು ಬಲವಾಗಿ ಖಂಡಿಸುವ, ತಮ್ಮ ಭಾವನೆಗಳಿಗೆ ತಕ್ಕಂತೆ ಬದುಕು ರೂಪಿಸಿಕೊಳುಲು ಹೋರಾಟ ಅನಿವಾರ್ಯವೆಂದುಕೊಂಡು ಕಾರ್ಯೋನ್ಮಕ್ತಳಾಗಿದ್ದಾಳೆ ಹಾಗೇ ಎನ್, ಗಾಯಿತ್ರಿಯವರು ತಮ್ಮ ಸ್ತ್ರೀಪರ ಕಾಳಜಿಯನ್ನು ಚಿಂತನೆಗಳನ್ನು ಕುರಿತು ಅಭಿವ್ಯಕ್ತಿಸಿದ್ದಾರೆ ಅಂತೆಯೇ ಆ ಮೂಲಕ ಮಹಿಳೆಯ ಸ್ವಾತಂತ್ರ್ಯಕ್ಕೆ ಸಮಾನತೆಗೆ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕೆ ಒತ್ತಾಯಿಸಿದ್ದಾರೆ. ಪ್ರೋತ್ಸಾಹಿಸಿದ್ದಾರೆ. ಬೆಂಬಲಿಸಿದ್ದಾರೆ ಮಾಡಬೇಕೆಂದು ಸದ್ದುದ್ದೇಶವೇ ನನ್ನ ಅಧ್ಯಯನದ ಕೇಂದ್ರ ಬಿಂದುವಾಗಿದೆ.

ವ್ಯಾಪ್ತಿ ಮತ್ತು ಸ್ವರೂಪ

ಈ ಅಧ್ಯಯನದ ವ್ಯಾಪ್ತಿಯಲ್ಲಿ ಮುಖ್ಯವಾಗಿ 5 ಅಧ್ಯಾಯಗಳನ್ನು ಮಾಡಿಕೊಂಡಿದ್ದು ನಮಗಿರುವ ಪರಿಮಿತ ಕಾಲಾವಧಿಯೊಳಗೆ ಲೇಖಕಿಯಾದ ಎನ್ ಗಾಯಿತ್ರಿಯವರ ಸಾಹಿತ್ಯಕ್ಕೆ ಹೊರತಾಗಿ ನನ್ನ ಅಧ್ಯಯನಕ್ಕೆ ಸಂಬಂದಿಸಿದಂತೆ ಅನ್ವಯಿಸುವ ಮಹಿಳಾ ಸಾಹಿತ್ಯಗಳನ್ನು ಆಯ್ಕೆ ಮಾಡಿಕೊಂಡು ನನ್ನ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದೇನೆ.

ಡಾ.ಎನ್ ಗಾಯಿತ್ರಿಯವರ ಒಟ್ಟಾರೆ ಲೇಖನಗಳಲ್ಲಿ ಮಹಿಳೆಗೆ ಅಗಿರುವ ಅನ್ಯಾಯವನ್ನು ಶೋಷಣೆಯನ್ನು ಕ್ರೌರ್ಯವನ್ನು ಹೇಗೆ ಪ್ರತಿಭಟಿಸಿದ್ದಾರೆ ಮತ್ತು ಆ ಮೂಲಕ ತಮ್ಮ ನಿಲುವುಗಳನ್ನು ಹೇಗೆ ವ್ಯಕ್ತಪಡಿಸಿದ್ದಾರೆ ಹಾಗೂ ಕೌಟುಂಬಿಕವಾಗಿ ಸಾಂಪ್ರದಾಯಿಕವಾಗಿ, ಲಿಂಗಭೇದ, ಸ್ವಾತಂತ್ರ್ಯ ಈ ಎಲ್ಲಾ ದೃಷ್ಟಿ ಕೋನಗಳನ್ನು ಇಟ್ಟುಕೊಂಡು ಸೃಜನಾತ್ಮಕ ಹಾಗೂ ಸೃಜನೇತರ ಕೃತಿಗಳನ್ನು ಆಧಾರವಾಗಿ ಇಟ್ಟುಕೊಂಡು ಎನ್, ಗಾಯಿತ್ರಿಯವರ ಸಾಹಿತ್ಯದಲ್ಲಿ ಮಹಿಳಾ ಚಿಂತನೆ ಎಂಬುದನ್ನು ಒಂದು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲು ಪ್ರಯತ್ನಿಸಿದ್ದೇನೆ.

ಅದ್ಯಾಯ–2
“ಮಹಿಳಾ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಅಧ್ಯಾಯ–2
"ಮಹಿಳಾ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಸ್ತ್ರೀ ಸಂವೇದನೆ ಎಂಬ ಪದದ ಅರ್ಥ ಶರೀರದಷ್ಟೆ ಅವಳ ಭಾವನೆಗಳೂ ಸೂಕ್ಷ್ಮ ಆರ್ದ್ರತೆ ಉಳ್ಳದ್ದು, ಸಹಿಷ್ಣುತೆ, ತಾಳ್ಮೆ, ವಿನಯ, ಮುಡಿತ, ಉಪಕಾರ, ಸೌಜನ್ಯ ಎಂಬ ನೊಗ ಕಟ್ಟಲಾಗಿದೆ ಪಾರಂಪರಿಕ ಬೋಧನೆಯಲ್ಲದೆ ಆತ್ಮಗತವಾಗಿಯೇ ಸೇರಿ ಹೋಗಿದೆ. ಅವಳ ಭಾವನೆಗಳು ಅಸ್ಪಷ್ಟವಾಗಿ ಉಳಿಯುತ್ತವೆ. ಅತಿ ಸ್ಪಷ್ಟತೆ ಅವಳ ಸ್ವಭಾವಕ್ಕೆ ವಿರುದ್ಧವಾದುದು.

'ಸ್ತ್ರೀ ಪ್ರಾಬಲ್ಯತೆ ಎಂಬ ಪದ ಅದರ ಅರ್ಥದಷ್ಟೆ ವಿಚಿತ್ರವಾದ ಮರಿಚಿಕೆ ಅದರ ಸನಿಹಕ್ಕೆ ಹೆಜ್ಜೆ ಇಟ್ಟಂತೆಲ್ಲಾ ಅದು ಹಿಂದಕ್ಕೆ ಸರಿಯುತ್ತದೆ ಆದರೂ ಆ ದಯಾ ಹಚ್ಚಿದ ಆಶಾವಾದದಿಂದ ಮಹಿಳೆಯರಾದ ನಾವು ಪಡೆಯಲು ಓಡುತ್ತಲೇ ಇದ್ದೇವೆ' (ಹೆಚ್.ಎಸ್ ಅನುಪಮಾ)

ಸ್ತ್ರೀ ಸಂವೇದನೆಯು ಪುರುಷ ಸಂವೇದನೆಗಿಂತ ಭಿನ್ನ, ಅದು ಸಹಜ ಕೂಡಾ ಇದಕ್ಕೆ ಸಾಂಸ್ಕೃತಿಕ ಕಾರಣಗಳಿವೆ. ಸಮಾನತೆಯ ಆಧಾರದ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು–ಗಂಡಿನ ದೃಷ್ಟಿಕೋನ ಮತ್ತು ಅನುಭವಗಳ ನಡುವೆ ವಿಪರೀತ ಅಂತರವಿರುವುದಿಲ್ಲ ಎಂಬುದು ಸ್ತ್ರೀವಾದದ ನಿಲುವು ಹೆಣ್ಣುತನ–ಗಂಡುತನ ಕೇವಲ ವ್ಯತ್ಯಾಸಗಳನ್ನು ಸೂಚಿಸಲು ಮೀಸಲಾಗದೆ ಗಂಡು–ಹೆಣ್ಣಿನ ನಡುವೆ ವಿಭಜನೆಯ ರೇಖೆ ಹಾಕಿ ಅಸಮಾನತೆಯನ್ನು ಹುಟ್ಟು ಹಾಕಿ, ಮೇಲು–ಕೀಳುಗಳನ್ನು ಸೃಷ್ಟಿಸಿ ಒಂದು ವರ್ಗ ಮತ್ತೊಂದನ್ನು ಶೋಷಿಸಲು ದಾರಿಯಾಯಿತು ಹಾಗೆಂದೇ ಒಂದು ಪರಿಸರದಲ್ಲಿ ಬೆಳೆದ ಹೆಣ್ಣು ಗಂಡಿನ ಅನುಭವದ ನಡುವೆ ಅಗಾಧ ವ್ಯತ್ಯಾಸವಿರುತ್ತದೆ ಹೆಣ್ಣನ್ನು ಅಬಲೆಯಾಗಿಸುವ, ಮನೆಗೆಲಸಕ್ಕೆ ಹಚ್ಚುವ,

ತಗ್ಗಿ-ಬಗ್ಗಿ ನಡೆಯುವ ವಿಧೇಯತೆಯನ್ನು ಕಲಿಸುವ, ವಿವಾಹಕ್ಕೆಂದೇ ತಯಾರಿಸುವ ಪರಿಯಲ್ಲಿ ಬಾಲ್ಯದಿಂದಲೇ ಆರಂಭವಾಗುವ ಗೃಹಿಣೀ ಪಾತ್ರದ ತರಬೇತಿ ಅವಳೊಡನೆ ಹುಟ್ಟಿ ಬೆಳೆದ ಗಂಡು ಮಗುವಿಗೆ ನೀಡುವ ಪ್ರೋತ್ಸಾಹ ಅವನ ಭವಿಷ್ಯವನ್ನು ರೂಪಿಸುವ ಪರಿಯೇ ಬೇರೆ ಇರುತ್ತದೆ. ಈ ಮೂಲ ಕಾರಣದಿಂದಲೇ ಸ್ತ್ರೀಯರ ಅನುಭವ, ಸಂವೇದನೆ ಬೇರೆಯಾಗುತ್ತದೆ ಸ್ತ್ರೀವಾದಿಗಳಿಂದು ಪುರುಷ ಕೇಂದ್ರಿತ ಮಾದರಿಗಳನ್ನು ಉರುಳಿಸುವ ಮೂಲಕ ಸ್ತ್ರೀ-ದೃಷ್ಟಿಕೋನ, ಸ್ತ್ರೀ ಅನುಭವಗಳನ್ನು ತೆರೆದಿಡುವ ಮೂಲಕ ಸ್ತ್ರೀಯನ್ನು ಮೂಕವಾಗಿಸಿದ ವ್ಯವಸ್ಥೆಯನ್ನು ಬದಲಿಸ ಹೊರಟಿದ್ದಾರೆ.

ಬಿಟ್ಟಿಹ ಮೊಲೆಯ ಭರದ ಜವ್ವನದ ಚೆಲುವು ಕಂಡು ಬಂದಿರಣ್ಣಾ
ಅಣ್ಣಾ ನಾನು ಹೆಂಗಸೂ ಅಲ್ಲ ಅಣ್ಣಾ ನಾನು ಸೂಳೆಯಲ್ಲಾ!
ಅಣ್ಣಾ ಮತ್ತೆ ನನ್ನ ಕಂಡು ಕಂಡೂ ಆರೆಂದು ಬಂದಿರಣ್ಣಾ!
ಚೆನ್ನ ಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪುರುಷನು
ನಮಗಾಗದ ಮೋರೆ ನೋಡಿರಣ್ಣಾ!

(ಅಕ್ಕಮಹಾದೇವಿ)

ವೇದ ಕಾಲದಲ್ಲಿದ್ದ ಸ್ತ್ರೀ ಸ್ವಾತಂತ್ರ್ಯ ಸ್ಮೃತಿ ಕಾಲಕ್ಕೆ ಬರುವುದರೊಳಗಾಗಿ ಮಸುಕಾಗಿ ಹೋಯಿತು. ಈ ಹಿನ್ನೆಲೆಯಲ್ಲಿ ಸುಪುತ್ರೋ ಕುಲದೀಪಕ ಎಂಬ ಭಾವನೆ ಶೋಷಿತ ಹೆಣ್ಣು ಮಗುವಿನ ವಿಷಯದಲ್ಲಿ ಮೌನ ತಾಳದೆ ಹೀಗಿದ್ದು ಚಂಡಯ್ಯ ಮಲ್ಲದೇವಿಯರು ತಮ್ಮ ಮಗಳ ಸೋಮವ್ವೆಯನ್ನು 'ಸುಪುತ್ರಿ ಕುಲದೀಪಿಕೆ' ಎಂದು ಕರೆದದ್ದು ಹೆಣ್ಣಿಗೆ ದೊರೆತ ಗೌರವವನ್ನು ಸೂಚಿಸುವ ಗಮನಾರ್ಹ ಸಂಗತಿ ಎನಿಸಿದೆ.

ನಿಜವಾದ ಶ್ರಮ ಜೀವನ ಅನಾದಿಕಾಲದಿಂದಲೂ ಹೆಣ್ಣಿನದೇ ಆದರೂ ಹೆಣ್ಣಿನ ಪ್ರಜ್ಞೆಯನ್ನು ಸೀಮಿತ ಹೊಸ್ತಿಲೊಳಗೆ ಕಟ್ಟಿಹಾಕಿ ಅವಳ ಬದುಕಿನ ವಿಕಸನವನ್ನು ಹೊಸಕು ಹಾಕುವ ತಂತ್ರವು ಶಾಸನಗಳಲ್ಲಿ ಪ್ರಧಾನವಾಗಿದೆ. ಹೀಗಾಗಿ ಕೆಲವರನ್ನು ಬಿಟ್ಟು ಉಳಿಸಿ ಸಾಮಾನ್ಯ ಸ್ತ್ರೀ ಸಮುದಾಯವನ್ನು ಆಡಳಿತ, ಉದ್ಯೋಗ, ಶಿಕ್ಷಣ, ನೀತಿ, ಕಾನೂನು, ಮುಂತಾದ ಪುರುಷ ವ್ಯವಸ್ಥೆಯಲ್ಲಿ ತುಳಿಯುತ್ತಲೆ ಬಂದಿದೆ.

ಕುಟುಂಬ ಎಂಬ ಪುಟ್ಟ ಅಂಗ ಸಂಸ್ಥೆಯಿಂದ ಹಿಡಿದು ಸಮಾಜ ಎಲ್ಲ ಹಂತದಲ್ಲೂ ಸ್ತ್ರೀ ಶೋಷಣೆ ನಿರಂತರವಾಗಿದೆ. ಅವಳನ್ನು ಶರಣಾಗತ ಸ್ಥಿತಿಯಲ್ಲಿಡಲು ಅತ್ಯಾಚಾರ ಎಂಬ ಮಹಾಸ್ತ್ರ ಪ್ರಯೋಗವಾಗುತ್ತಿದೆ ರಕ್ಷಕ ವ್ಯವಸ್ಥೆಯೇ ಶೋಷಣಾ ವ್ಯವಸ್ಥೆಯಾಗಿರುವುದೇ ವಿಪರ್ಯಾಸ ಇವೆಲ್ಲದರ ನಿರ್ಬಂಧ ಹೇರಲಾಗಿದೆ. ಅದನ್ನು ಭಾರತೀಯ ಪರಂಪರೆ, ಸಾಂಸ್ಕೃತಿಕ ಜವಾಬ್ದಾರಿಯ ನೈತಿಕ ಪ್ರಜ್ಞೆ ಎಂದು ಪ್ರತಿಬಿಂಬಿಸಲಾಗಿದೆ. ಆತ್ಮ ಪ್ರಜ್ಞೆಯನ್ನು ಮೀರಿ ಅಧೀನತೆಯನ್ನು ಪ್ರತ್ಯಕ್ಷದಲ್ಲಿ ಒಪ್ಪಿಕೊಂಡಿದ್ದಾಳೆ.

ಪಿತೃಪ್ರಧಾನ ಕುಟುಂಬ ಪದ್ಧತಿಯಲ್ಲಿಯೂ ಸ್ತ್ರೀ ಕುಟುಂಬದ ಹೊಣೆಗಾರಿಕೆಯೊಂದಿಗೆ ಸಮಾಜದ ಕಾರ್ಯಕಲಾಪಗಳಲ್ಲಿ ಭಾಗಿಯಾಗುತ್ತಿದ್ದುದ್ದು ಒಂದು ಹೆಮ್ಮೆಯ ವಿಷಯವೇ ಸರಿ ಧನಗರ ಕಂಚಿಕಬ್ಬೆ, ಮಣೆಗಾರ ಮಾದವ್ವ, ಹಾಡುವ ಕಲ್ಲವ್ವ, ಪಾತ್ರದ ಸಿರಿಯವ್ವ, ಎಣ್ಣೆಯನ್ನು ಮಾರುವ ಕುಂಚಡ ಗಿತ್ತಿಯರು, ಎಂಜಲು ತೆಗೆವ ಶೂದ್ರತಿಯರು, ಮುಂತಾದವರು ಶಾಸನಗಳಿಂದ ನಮಗೆ ದೊರೆಯುತ್ತಾರೆ.

ತದ ನಂತರದಲ್ಲಿ ವಚನಕಾರ್ತಿಯರು ಬರುವವರೆಗೆ ಕನ್ನಡದಲ್ಲಿ ಯಾವ ಸ್ತ್ರೀಯು ಬರೆದಿರುವಂತೆ ಕಾಣುವುದಿಲ್ಲ 12 ನೇ ಶತತಮಾನಕ್ಕೆ ಸೇರಿದ ಕವಿ ನಾಗಚಂದ್ರನೊಡನೆ ಸಂವಾದ ಮಾಡಿದಳು ಎಂಬುದಾಗಿ 'ಕಂತಿ' ಎಂಬ ಕವಯಿತ್ರಿಯ ಹೆಸರು ಕೇಳಿ ಬರುತ್ತದೆ. 7 ನೇ ಶತಮಾನಕ್ಕೆ ಸೇರಿದ ಎರಡನೇಯ ಪುಲಕೇಶಿಯ ಸೊಸೆ ವಿಜಯಾ ಮಹಾದೇವಿಯು ಸಂಸ್ಕೃತಿದಲ್ಲಿ ಕಾವ್ಯ ರಚನೆ ಮಾಡಿ ತನ್ನನ್ನು ಕಪ್ಪು ಸರಸ್ವತಿಯೆಂದು ಕರೆದುಕೊಂಡಿದ್ದಾಳೆ. ಎಂಬುದಾಗಿ ಕವಿ ರಾಜಶೇಖರ ಹೇಳುತ್ತಾನೆ.

ಮಧ್ಯಕಾಲೀನ ಸಂದರ್ಭಕ್ಕೆ ಆಗ ರಚಿತವಾದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಗೆ ಅವಳ ಸ್ಥಾನಮಾನಕ್ಕೆ ಹೆಚ್ಚು ಮಾನ್ಯತೆ ದೊರೆಯಿತೆಂಬುದನ್ನು ನಾವು ಮನಗಾಣಬಹುದಾಗಿದೆ. ಮಾನವ ಶಾಸ್ತ್ರದಲ್ಲಿ ಯಾವ ಸಮಾಜದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನವಿದೆಯೋ ಆ ಸಮಾಜದ ಸಂಸ್ಕೃತಿ ಉನ್ನತ ಮಟ್ಟದ್ದಾಗಿರುತ್ತದೆ ಎಂಬ ಚಿಂತನೆಯಿದೆ.

ತದನಂತರ ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಬಂದ ಶ್ಯಾಮಲಾದೇವಿ, ಕೊಡಗಿನ ಗೌರಮ್ಮ ಸರಸ್ವತೀಬಾಯಿ ರಾಜವಾಡಯವರತೆ ಸ್ತ್ರೀಯರ ಕೌಟುಂಬಿಕ ಸ್ಥಿತಿಯನ್ನು ಕುರಿತು ಸೂಕ್ಷ್ಮ ಸಂವೇದನೆಗಳೊಂದಿಗೆ ಬರೆಯುತ್ತಲೇ ಸಮಕಾಲೀನ ಸಾಮಾಜಿಕ ಸಂದರ್ಭಗಳ ಸಾಂಸ್ಕೃತಿಕ ಅಂಶಗಳನ್ನು ಚರ್ಚೆಗೆ ಗುರಿಪಡಿಸುವಂತ ಯತ್ನಗಳನ್ನು ವಿಶೇಷವಾಗಿ ಕಾಣಬಹುಸುದಾಗಿದೆ.

ಪ್ರಗತಿ ಶೀಲ ಸಾಹಿತ್ಯ ಚಳುವಳಿಯ ಒಂದು ಭಾಗವಾಗಿ ಗುರುತಿಸಲ್ಪಡದಿದ್ದರೂ ಆ ಅವದಿಯಲ್ಲಿ ಬರೆಯತೊಡಗಿದ ಹಲವಾರು ಲೇಖಕಿಯರಲ್ಲಿ ತೀವ್ರ ರೀತಿಯಲ್ಲಿ ತಮ್ಮ ಸಾಮಾಜಿಕ ಅರಿವನ್ನು ಪ್ರಕಟಿಸಿದ್ದಾರೆ. ಎಚ್.ವಿ ಸಾವಿತ್ರಮ್ಮ, ತ್ರಿವೇಣಿ ಮತ್ತು ಡಾ. ಅನುಪಮಾ ನಿರಂಜನರ ಬರಹಗಳು ಸ್ತ್ರೀ ಪುರುಷ ಸಂಬಂಧಗಳು ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಸ್ತ್ರೀ ಪುರುಷ ಸಂಬಂಧಗಳು ಪುರುಷ ಪ್ರಧಾನ ವ್ಯವಸ್ಥೆಯೊಳಗೆ ತಳೆಯುವ ವಿಷಮ ಸ್ವರೂಪಗಳತ್ತ ಹೆಚ್ಚಿನ ಜಾಗೃತಿಯನ್ನು ಪ್ರಕಟಿಸುತ್ತವೆ.

"ಶೋಷಣೆಯ ಸಮಗ್ರ ಪರಿಜ್ಞಾನವನ್ನು ಹೊಂದುವುದು ಅಂದರೆ ಸ್ತ್ರೀಯರು ಪುರುಷಶಾಯಿಯ ವಿರುದ್ಧ ಹೋರಾಟ ಮಾಡುವುದರ ಅವಶ್ಯಕತೆಯನ್ನು ಮನದಟ್ಟು ಮಾಡಿ ಕೊಡುವುದಷ್ಟೇ ಅಲ್ಲ ಸ್ತ್ರೀಯರ ಶೋಷಣೆಯನ್ನು ಪುರುಷರಿಂದ ಮಾಡಿಸುತ್ತ ಬಂದಿರುವ ಹಾಗೂ ಪುರುಷರನ್ನೂ ಇನ್ನೊಂದು ಶ್ರೇಣಿಯಲ್ಲಿ ಶೋಷಣೆ ಗೊಳಪಡಿಸುವ ವರ್ಗ ವ್ಯವಸ್ಥೆಯನ್ನು ಸ್ತ್ರೀಯರೂ ಪುರುಷರೂ ಜಂಟಿಯಾಗಿ ಹಾಗೂ ಸಾಮೂಹಿಕವಾಗಿ ಪ್ರಶ್ನಿಸುವಂತೆ ಕೊನೆಯಲ್ಲಿ ಕಿತ್ತೊಗೆಯುವಂತೆ ಸರಿಯಾದ ಮಾರ್ಗದರ್ಶನ ಗಳಿಸುವುದು.

ಅಕ್ಷರ ಕ್ರಾಂತಿ ವೈಚಾರಿಕ ಕ್ರಾಂತಿಗೆ ಆಹ್ವಾನ ನೀಡಿರುವ ವೈದೇಹಿಯವರ ಅಡುಗೆ ಮನೆ ಹುಡುಗಿ ಕವಿತೆಯಲ್ಲಿ ಪ್ರಸ್ತುತತೆಯಿಂದ ಬಿಡಿಸಿಕೊಂಡು ಯಾವುದೋ ಲೋಕಕ್ಕೆ ಮನ್ನುಗ್ಗುವ ತವಕವಿದೆ. ಸ್ವಾತಂತ್ರ್ಯ ಸಿಗುವುದಾದರೆ ರಾವಣಲೋಕವಾದರೂ ಸೈ ತಪ್ತಗೊಂಡ ಹೆಣ್ಣಿನ ಮನಸ್ಸಿನ ಸಂವೇದನೆಗಳನ್ನು ಅಡುಗೆ ಕೋಣೆಗಳಲ್ಲಿ ಅದುಮಿಡಲಾಗಿತ್ತು. ಜನಪದ ಸಾಹಿತ್ಯದಲ್ಲಿ ಮನೆತನದ ಮತ್ತು ಸಂಬಂಧಗಳ ನಿಭಾಯಿಸುವಿಕೆ ಇದ್ದರೂ ಹೆಣ್ಣಾಗಿ ಹುಟ್ಟೋದಕ್ಕಿಂತ ಮಣ್ಣಾಗಿ ಹುಟ್ಟುವ ತೀವ್ರ ಪ್ರತಿಭಟನೆ ಇದೆ.ಸೀತೆ ರಾವಣನೊಂದಿಗೆ, ಸಾವಿತ್ರಿ ಯಮನೊಂದಿಗೆ ದ್ರೌಪದಿ ದುಶ್ಯಾಸನನೊಂದಿಗೆ, ಶಕುಂತಲೆ ದಮಂತಿ ಪರಿಸ್ಥಿಯೊಂದಿಗೆ ಪುರಾಣ ಕಾಲದಿಂದಲೂ ಪ್ರತಿಭಟಿಸುತ್ತಲೇ ಇದ್ದಾರೆ ಒಲ್ಲದ ಗಂಡನನ್ನು ದಿಕ್ಕರಿಸಿದ ಮಹದೇವಿ, ಅಕ್ಕ, ಸಹಗಮನವನ್ನು ಒಪ್ಪಿಕೊಂಡ ವೀರಸಯನಿಕರ ಮಡದಿಯರು ಎರಡು ಮನಸ್ಥಿಯ ಸ್ತ್ರೀಯರಲ್ಲೂ ಮೂಲವಾಗಿ ಅಡಗಿರುವುದು ಪ್ರತಿಭಟನೆಯೇ ಆಧುನಿಕ ಸಮಾಜದಲ್ಲಿ ಶಿಕ್ಷಣ, ಮೀಸಲಾತಿ, ಪ್ರಾತಿನಿದ್ಯ ಹೊರತಾಗಿಯೂ ಮಹಿಳಾ ಸುರಕ್ಷತೆ ಬಾಕಿ ಉಳಿದಿಸೆ ಎಂದು ಸ್ತ್ರೀವಾದಿ ಅನುಪಮಾ ನುಡಿದಿದ್ದಾರೆ.

ಪ್ರಕಟಿಸುವ ಪತ್ರಿಕೆಗಳೇ ಕಂಪಿಸುವಷ್ಟು ಅತ್ಯಾಚಾರ ಈ ದಿನಗಳಲ್ಲಿ ನಡೆದಿದೆ ಅದು ಕೇವಲ ಸುದ್ದಿಗಳಾಗಿ ಮರೆಯಾಗುತ್ತಿವೆ. ಇದೇ ನಾಗರಿಕ ಸಮಾಜದ ಮುಖವಾಡ ಸ್ತ್ರೀಯರಿಗೆ ವಸ್ತ್ರಸಂಹಿತೆ ಭೋಧಿಸುತ್ತಿದೆ ನಗ್ನ ಚಿತ್ರಗಳಿಗೆ ಪಾರಿತೋಷಕ ನೀಡುತ್ತದೆ. ಪ್ರಚಾರ ಮಾಧ್ಯಮಗಳಲ್ಲಿ ಸ್ತ್ರೀಯರನ್ನು ಅಶ್ಲೀಲವಾಗಿ ಬಿಂಬಿಸಲಾಗುತ್ತಿದೆ. ಪುರುಷ ಸಮಾಜದ ಹುನ್ನಾರಗಳು ಹೆಣ್ಣಿನ ಜನ್ಮದ ಹಕ್ಕನ್ನೂ ಕಸಿಯುತ್ತಿವೆ, ಹೆಣ್ಣು ಬ್ರೂಣಗಳು ಭೂಮಿಗೆ ಬರುವುದರಲ್ಲೇ ಜೀವಹತ್ಯೆ ನಡೆದಿದೆ ವಿಜ್ಞಾನ ನೈತಿಕ ತಾಟಸ್ಥ್ಯ ತಳೆದಿದೆ ಕಾನೂನು ಮುರ್ಖಿ ಕೈಗೊಂಬೆಯಾಗಿದೆ.

ಧರ್ಮ, ಕಾನೂನು, ಆಡಳಿತ, ಅರ್ಥವ್ಯವಸ್ಥೆ ಸಮಾಜದ ಎಲ್ಲಾ ಕ್ಷೇತ್ರಗಳನ್ನು ಹಿಡಿದಿರುವನು ಪುರುಷ, ಕಾನೂನುಗಳಷ್ಟೆ ಅಲಿಖಿತ ನೀತಿ ಸಂಹಿತೆಗಳೂ ಸ್ತ್ರೀ ಶೋಷಣೆಗೆ ಮುಖ್ಯ ಕಾರಣವಾಗಿದೆ.

ಉದ್ಯೋಗವಂತ ಮಹಿಳೆಯರಿಗೂ ಆರ್ಥಿಕ ಸ್ವಾತಂತ್ರ್ಯ ದಕ್ಕದಂತೆ ಪುರುಷ ಯಜಮಾನಿಕ ನಡೆಸಿದೆ, ಆದಿವಾಸಿ ಜನಾಂಗಗಳ ಹಟ್ಟಿಯಲ್ಲಿ ಹೆಣ್ಣು ಮಕ್ಕಳಿಗೆ ಅವೈಜ್ಞಾನಿಕ ಅಮಾನವೀಯ ಆರೋಗ್ಯಕರ ಮೈಲಿಗೆ ಸಂಪ್ರದಾಯವನ್ನು ಹಾಕಿಕೊಡಲಾಗಿದೆ ನೈಸರ್ಗಿಕ ಕ್ರಿಯೆಗಳಿಗೆ ಸಾಂಪ್ರದಾಯಿಕ ಕಟ್ಟುಪಾಡುಗಳ ಕವಚ ನೀಡಿ ಉಪಚರಿಸಬೇಕಾದ ಹೆಣ್ಣು ಮಕ್ಕಳಿಗೆ ಹಟ್ಟಿಯಿಂದ ಹೊರದೂಡಲಾಗಿದೆ. ತಿಳುವಳಿಕೆ ಇದ್ದರೂ ಆಧುನಿಕ ಸಮಾಜ ಮೌನಿಯಾಗಿದೆ ಇಂತಹ ಮೌಡ್ಯಗಳಿಗೆ ಬಲಿಯಾಗುವವಳು ಮಹಿಳೆ ಇಂತಹ ಸಾಮಾಜಿಕ ಅನ್ಯಾಯಗಳಿಂದ ಸ್ತ್ರೀಯರು ಪ್ರಾಣ ಕಳೆದುಕೊಳ್ಳುವಂತಾಗಿದೆ.

ಮಹಿಳೆ ಕುಟುಂಬದಲ್ಲಿ ಪ್ರೀತಿ, ಆಸ್ತಿ, ಹಕ್ಕು ಎಲ್ಲಕ್ಕೂ ಕೊರತೆಯಾಗಿದೆ. ಸಮಾಜದಲ್ಲಿ ಸ್ಥಾನಮಾನಕ್ಕೆ ಒದ್ದಾಡುತ್ತಿರುವ ಮಹಿಳೆ, ಇಡೀ ಜೀವ ಸಂಕುಲವನ್ನು ಪೊರೆಯುವ ಸೃಷ್ಟಿ ಮಾತೆಯಾಗಿದ್ದಾಳೆ. ಮನೆಯಿಂದ ಶಾಲೆಯಿಂದ ಹಿಡಿದು ಕಛೇರಿಗಳಲ್ಲಿ ಕಡೆಗೆ ಮಹಿಳಾ ಜೈಲುಗಳಲ್ಲಿ ಮಹಿಳಾ ಆಶ್ರಮಗಳಲ್ಲಿ ಹಿಂಸಾಚಾರ ಅವಿರತವಾಗಿ ನಡೆದಿದೆ.

ಪ್ರಸ್ತುತ ಸಂದರ್ಭ ಸವನಾಗರಿಕತೆ ಉನ್ನತ ಮಟ್ಟಕ್ಕೇರಿದ್ದರೂ ಲಿಂಗ ಅಸಮಾನತೆಯ ಅನಿಷ್ಟ ಸಮಸ್ಯೆ ರೋಗದಂತೆ ಕಾಡುತ್ತಿದೆ ಸಾಹಿತ್ಯೇತರ ಸವಾಲುಗಳನ್ನು ಸಾಹಿತ್ಯದ ಮೂಲಕ ವಿವರಿಸುವ ಮಹಿಳೆ ತನ್ನ ಅಸ್ತಿತ್ವವಾಗಿ ಪ್ರಯತ್ನಿಸುತ್ತಿದ್ದಾಳೆ. ಮಹಿಳೆಗೆ ಅವಳ ಭಾವನೆಗೆ ಅಭಿಪ್ರಾಯಗಳಿಗೆ ಮಾತಿಗೆ ಶ್ರಮಕ್ಕೆ ಬೆಲೆ ಕೊಡದೆ ಪುರುಷ, ಹೆಣ್ಣನ್ನು ಮೂಲೆಗುಂಪಾಗಿಸಿದ್ದಾನೆ ಎಲ್ಲ ಕಾಲಕ್ಕೂ, ಎಲ್ಲ ದೇಶದಲ್ಲೂ ಶೋಷಿತಲಾದವಳು ಹೆಣ್ಣು, ಉಪ ಸೃಷ್ಟಿ ಮಾತ್ರ ಪುರುಷನಿಗಾಗಿ ಸೃಷ್ಟಿಯಾದ ಉಪವಸ್ತು ಎಂದು ಕಡೆಗಣಿಸಲ್ಪಟ್ಟಿದ್ದಾಳೆ ಪುರುಷ ಬ್ರೈಡ್ ವಿನ್ನರ್, ಸ್ತ್ರೀ ಬ್ರೈಡ್ ವೇಕರ್ ಮಾತ್ರ' ಹಬ್ಬ, ಆಚರಣೆ, ಮದುವೆ ಮುಖ್ಯ ಸಂದರ್ಭಗಳಲ್ಲಿ ಉಪವಾಸ ವ್ರತಕ್ಕೆ ಪ್ರಚೋದಿಸಿ 'ಮೌನ'ಕ್ಕೆ ತಳ್ಳುತ್ತಿದ್ದರು ಅಸಮಾನತೆಯನ್ನು ಪ್ರಶ್ನಾಪೂರ್ವಕವಾಗಿ ಆಚರಿಸಲಾಗಿದೆ. ಮನುಧರ್ಮ ಕಾಲದಿಂದಲೂ ಪುರುಷನ ಆಶ್ರಮದಲ್ಲಿ ಬಂಧಿಸಲ್ಪಟ್ಟಿದ್ದಾಗಲೇ ಬ್ರಮಾತ್ಮಕ ಸನ್ನಿವೇಷ ನಿರ್ಮಿಸಿದ್ದಾನೆ. ಈ ತಾರತಮ್ಯ ಪುರುಷ ಸೃಷ್ಟಿಯೇ ಹೊರತು ನಿಸರ್ಗ ಸೃಷ್ಟಿ ಅಲ್ಲ ಬೇರೆ ಬೇರೆ ಯಾವ ಪ್ರಾಣಿ ಪಕ್ಷಿಗಳು ಈ ರೀತಿ ಪ್ರಕೃತಿಯಲ್ಲಿ ವರ್ತಿಸುತ್ತಿಲ್ಲ ಪ್ರಪಂಚದ ಈವರೆಗಿನ ಎಲ್ಲ ವ್ಯಾಖ್ಯಾನಗಳಲ್ಲಿ ಸಿದ್ಧಾಂತಗಳಲ್ಲಿ ಶಾಸ್ತ್ರಗಳಲ್ಲಿ 'ಮಾನವ-ಮನುಷ್ಯ' ಎಂಬ ಹೇಳಿಕೆಗಳೇ ವರ್ಣಿತವಾಗಿದೆ. ಈ ಪದದಲ್ಲೇ ಸ್ತ್ರೀ ಅಗೋಚರವಾಗಿದ್ದಾಗಲೇ ಬೈಗುಳಗಳಿಗೆ ಅಪನಂಬಿಕೆ ಅಪಶಕುನಗಳಿಗೆ ಹೆಣ್ಣನ್ನು ಕೇಂದ್ರವಾಗಿಸಿಕೊಳ್ಳಲಾಗಿದೆ. ಪುರುಷ ವೀರತ್ವದ, ಸಾಹಸದ, ಬುದ್ಧಿ ಲಕ್ಷಣಗಳನ್ನು ತಾನು ಧರಿಸಿ, ಲಜ್ಜೆ ಭಯಬೀತಿ, ಜಾಳತನ ಹೆಣ್ಣಿಗೆ ಆರೋಪಿಸಿದ್ದಾರೆ ಇದು ಅದಲು ಬದಲಾದರೆ ದೋಷ ಎಂದಿದ್ದಾನೆ.

ಸ್ತ್ರೀ ಪರಿಕಲ್ಪನಾಧಾರಿತ ಇತ್ತೀಚಿಗೆ ಒಂದು ದಟ್ಟ ಅಲೆಯನ್ನೇ ಸೃಷ್ಟಿಸಿದೆ. ಸ್ತ್ರೀಪರ ಸೈದ್ಧಾಂತಿಕ ವಾದವನ್ನು ವಿಮರ್ಶಕರು ಪ್ರಯೋಗದಲ್ಲಿ ತೊಡಗಿಸಿ ಕೊಂಡಿದ್ದಾರೆ ಸ್ತ್ರೀ ವಾದದ ಪ್ರಕಾರ ಮನುಷ್ಯ ದ್ವಿಲಿಂಗ ಸ್ತ್ರೀ –ಪುರುಷ ಲಿಂಗತಾರತಮ್ಯ ಸಲ್ಲದು ಪುರುಷನಾದವನು ಹೆಣ್ಣನ್ನು ತನಗಿಂತ ಎಲ್ಲದರಲ್ಲೂ ಕೆಳಗಿನವಳು ಕೀಳಾದವಳು ಎಂದು ಭಾವಿಸಿದ್ದಾನೆ ಈ 85% ಪುರುಷರಲ್ಲಿ ವಿದ್ಯಾವಂತ ಪುರುಷರಲ್ಲೂ ಅಡಗಿರುತ್ತದೆ ಬಲಕ್ಕಿಂತ ಮನೋಬಲ ಮುಖ್ಯವೆಂದು ಅವರು ಭಾವಿಸಿಲ್ಲ.

<u>ಸಿಮೋನ್ ದ ಬೋವಾ</u>

ಸ್ತ್ರೀವಾದದ ಆದಿ ಚಿಂತಕಿಯರಲ್ಲಿ ಮುಖ್ಯವಾಗಿ ಗಮನಿಸಲೇಬೇಕಾದ ಹೆಸರು ಸಿಮೋನ್ ದ ಬೋವಾ. ಆಕೆ ರಚಿಸಿದ ಕೃತಿಯು ಸ್ತ್ರೀವಾದಿ ವಿಶ್ಲೇಷಣೆಯಲ್ಲೇ ಗಮನಾರ್ಹವಾದುದು. ಈ ಕೃತಿಯಲ್ಲಿ ಆಕೆ ಪ್ರತಿಪಾದಿಸಿದ ಅನೇಕ ವಿಚಾರಗಳು ಮುಂದಿನ ಅನೇಕ ಸ್ತ್ರೀವಾದಿ ವಿಚಾರಗಳ ಹುಟ್ಟಿದೆ ಪ್ರೇರಣೆ ನೀಡಿವೆ. 'ಮಹಿಳೆ ಎನ್ನುವುದು ಜೀವಶಾಸ್ತ್ರೀಯ ಘಟಕ. ನಿವಾರಿಸಲು ಸಾಧ್ಯವಿಲ್ಲದ ಒಂದು ಜೈವಿಕ ವಾಸ್ತವಾಂಶ . ಅದು ಚಾರಿತ್ರಿಕ ಅಂಶವಲ್ಲ. ಈ ವಾಸ್ತವದಿಂದಾಗಿ ಹಿಂದಿನ ಯಾವ ಚಾರಿತ್ರಿಕ ಘಟ್ಟದಲ್ಲೂ ಅರಿವಿಗೆ ಬರದಿದ್ದ ವಿಶಿಷ್ಟ ರೀತಿಯ ದಬ್ಬಾಳಿಕೆ ಆಕೆ ಒಳಗಾಗುತ್ತಾಳೆ. ಭಿನ್ನವಾದ ಭೂತಕಾಲವಿಲ್ಲದ ಮೇಲೆ ಭವಿಷ್ಯ ತಾನೆ ಹೇಗೆ ಭಿನ್ನವಾಗಲು ಸಾಧ್ಯ? ಎನ್ನುವ ಬೋವಾ 'ಶರೀರವೇ ವಿಧಿ' ಎಂಬುದನ್ನು ಪ್ರತಿಪಾದಿಸಿದಳು.

ಸಿಮೋನ್ ದ ಬೋವಾ ಚಾರಿತ್ರಿಕ ಭೌತಿಕವಾದ, ಮನೋವಿಶ್ಲೇಷಣೆ ಮತ್ತು ಅಸ್ತಿತ್ವದ–ಇವುಗಳ ಆಧಾರದ ಮೇಲೆ ಮಹಿಳೆಯರ ಮೇಲಾಗುತ್ತಿರುವ ಶೋಷಣೆಯ ಸಿದ್ಧಾಂತವನ್ನು ನಿರ್ಮಿಸಲು ಪ್ರಯತ್ನಿಸುತ್ತಾಳೆ. "ಚಂಚಲತೆ ಮಹಿಳೆಯ ವ್ಯಕ್ತಿತ್ವದ ಮುಖ್ಯ ಸ್ವಭಾವವಾಗಿದೆ. ಆದ್ದರಿಂದ ಆಕೆ ಸಾಮಾನ್ಯವಾಗಿ ಶೀಘ್ರ ಕೋಪಿಯೂ ಧೈರ್ಯಹೀನಳೂ ಆಗಿ ವರ್ತಿಸುತ್ತಾಳೆ. ಮಹಿಳೆಯ ಜೈವಿಕ ವಿಶಿಷ್ಟತೆ ಅವಳ ಬದುಕಿನಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಮಹಿಳೆ ತನ್ನ ಬದುಕಿನಲ್ಲಿ ಪಡೆಯುವ ಸ್ಥಾನಮಾನ ಅವಳಲ್ಲಿ ಅಂತರಂಗಿಕವಾಗಿರುವ ಜೈವಿಕ ತನ್ನ ಬದುಕಿನಲ್ಲಿ ಪಡೆಯುವ ಸ್ಥಾನಮಾನ ಅವಳಲ್ಲಿ ಅಂತರಂಗಿಕವಾಗಿರುವ ಜೈವಿಕ ಅಂಶದ ಪಾತ್ರಕ್ಕೆ ಅನುಸಾರವಾಗಿಯೇ ಇರುತ್ತದೆ" ಎನ್ನುವುದು ಸಿಮೋನ್‌ಳ ಅಭಿಪ್ರಾಯ. ಆದರೂ ಮಹಿಳೆಯ ಸ್ಥಾನಮಾನ ಕುರಿತಂತೆ ಅವಳ ಶಾರೀರಿಕ ಅಂಶವೇ ಏಕೈಕ ನಿರ್ಣಾಯಕ ಅಂಶವೆಂದು ಬೋವಾ ಹೇಳುವುದಿಲ್ಲ, ಅವಳದು ತಾತ್ವಿಕ, ಆರ್ಥಿಕ, ಸಾಮಾಜಿಕ ಅಂಶವೆಂದು ಬೋವಾ ಹೇಳುವುದಿಲ್ಲ,ಅವಳದು ತಾತ್ವಿಕ, ಆರ್ಥಿಕ, ಸಾಮಾಜಿಕ ಹಾಗೂ ಮನೋವೈಜ್ಞಾನಿಕ ಸಂಗತಿಗಳ ಬೆಳಕಿನಲ್ಲಿ ಜೈವಿಕ ಅಂಶಗಳನ್ನು ಪರೀಕ್ಷಿಸುವ ಒಂದು ಪ್ರಯತ್ನವಾಗಿದೆ. ಮಹಿಳೆಯ ಸ್ಥಾನಮಾನವು ಈ ಎಲ್ಲ ಅಂಶಗಳ ಪರಸ್ಪರ ಕ್ರಿಯೆಯಿಂದ ಮಾತ್ರ ಆಗಿದೆಯೆಂಬುದನ್ನು ಚರಿತ್ರೆಯುದ್ದಕ್ಕೂ ಕಾಣಬಹುದಾಗಿದೆ ಹಾಗೆಯೇ ದ ಬೋವಾ ನೀಡುವ ಕೆಲವು ಉದಾಹರಣೆಗಳು ಕುತೂಹಲಕಾರಿಯಾದವು " ಮನೆಗೆಲಸ ಮಹಿಳೆಯರ ಪಾಲಿಗೆ ಮೀಸಲಾಗಿರಲು ಕಾರಣವೇನೆಂದರೆ, ಅದಕ್ಕೆ ತಾಯ್ತನದ ತಾಳ್ಮೆ, ಕಾಳಜಿ ಮತ್ತು ಜಾಗರೂಕತೆಯ ಅವಶ್ಯಕತೆಯಿರುತ್ತದೆ. ಮನೆಗೆಲಸದ ಅವಶ್ಯಕತೆಗೂ ಅವಳ ಜೈವಿಕ ವಿಶಿಷ್ಟತೆಗೂ ಹೊಂದಾಣಿಕೆಯಾಯಿತು. " ಭೋವಾ ಒತ್ತಿ ಹೇಳುವ ಮಹಿಳೆಯ ಜೈವಿಕ ವಿಶಿಷ್ಟತೆಗಳು ಸದಾಕಾಲಕ್ಕೂ ಅವಳನ್ನು ಮನೆಗೆಲಸಗಳಿಗೆ ಗಂಟುಹಾಕಬೇಕೆಂಬ ಮಾತು ಒಪ್ಪಲಾಗುವುದಿಲ್ಲ.

ಮಹಿಳೆಯರ ಸ್ಥಾನಮಾನ ನಿರ್ಧರಿಸುವಲ್ಲಿ ತಾಯ್ತನದ ಅಂಶವನ್ನು ಕುರಿತು ಸಿಮೋನ್ ದ ಬೋವಾ ಹೇಳುವ ಮಾತುಗಳು ಸ್ತ್ರೀವಾದಕ್ಕೆ ಹೆಚ್ಚು ಉಪಯುಕ್ತವಾದವು. ಪುರುಷ ಒಂದು ವೈಜ್ಞಾನಿಕ ತತ್ವದ ಶೋಧನೆಯಿಂದ ಅಥವಾ ಒಂದು ಅನುಕರಣೆಯ ಹೊಸ ನಿರ್ಮಾಣದಿಂದ ಪಡೆಯುವಂಥ ತೃಪ್ತಿಯನ್ನು ಮಹಿಳೆ ಮಕ್ಕಳನ್ನು ಹೆರುವ ಮೂಲಕ ಪಡೆಯಬಲ್ಲಳು, ಎಂಬ ಕೆಲವರ ವಾದಕ್ಕೆ ಪ್ರತಿಯಾಗಿ ಬೋವಾಳ ವಾದ ಹೀಗಿದೆ. ಮಗುವನ್ನು ಹೇರುವುದು ಮತ್ತು ಅದಕ್ಕೆ ಮೊಲೆಯುಣಿಸುವುದು, ಇವು ಸಾಮಾಜಿಕ ಚಟುವಟಿಕೆಗಳಲ್ಲ, ಬದಲಿಗೆ ಅವು ನಿಸರ್ಗ ಸಹಜ ವಿದ್ಯಾಮಾನವಾಗಿದೆ. ಏಕೆಂದರೆ ಈ ವಿದ್ಯಾಮಾನಗಳ ಹಿಂದೇ ಯಾವುದೇ ಯೋಜನೆಗಳಿರುವುದಿಲ್ಲ. ಆದ್ದರಿಂದ ಈ ವಿದ್ಯಮಾನಗಳ ಸಕ್ರಿಯ ಅಂಗವಾಗಿ ಮಹಿಳೆ ತೊಡಗಿದರೂ ಅವು ಮಹಿಳೆಯ ಆಸ್ತಿತ್ವಕ್ಕೆ ಸಾಮಾಜಿಕವಾಗಿ ಉನ್ನತ ಸ್ಥಾನ ದೊರಕಿಸಿಕೊಡುವ ಸಾಧ್ಯತೆಗಳಿಲ್ಲ."

ಮಾನವನ ಸ್ವಭಾವದಲ್ಲಿ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ, ಅದಕ್ಕೆ ಒಡೆಯನಾಗಬೇಕೆಂಬ ಬಯಕೆಯನ್ನು ಗುರುತಿಸುವ ಬೋವಾ ಅದನ್ನೊಂದು ಮೂಲಪ್ರವೃತ್ತಿ ಎಂದು ಪರಿಗಣಿಸುತ್ತಾಳೆ. ಸಿಮೋನ್ ಬೋವಾಳ ವಿಚಾರ ಸರಣಿಯಲ್ಲಿ ಎಲ್ಲೋ ಒಂದೆಡೆ ವೈರುಧ್ಯವಿದೆ. ಅವಳು ಹೇಳುವಂತೆ ಸಾಮ್ರಾಜ್ಯಶಾಹಿ ಪ್ರಜ್ಞೆಯೆನ್ನುವುದು ಪುರುಷನು ಬದುಕುವ ಸಾಮಾಜಿಕ, ಆರ್ಥಿಕ ಪರಿಸರದಿಂದ ಸ್ವಂತವಾಗಿ ಮನಿಷ್ಯನಲ್ಲಿ ಅಂತರ್ಗತವಾಗಿದ್ದರೆ, ಅವನ ಸ್ವಭಾವವನ್ನು ನಿರ್ಧರಿಸುವಲ್ಲಿ ಸಾಮಾಜಿಕ ವ್ಯವಸ್ಥೆ ಯಾವ ಪಾತ್ರವನ್ನೂ ವಹಿಸುವುದಿಲ್ಲ ಎಂದಾಗುತ್ತದೆ. ಆದರೆ ನಿಜವಾದ ವಿಮೋಚನ ಸಾಧ್ಯವಾಗಬೇಕಾದರೆ, ಶೋಷಣೆಗೆ ಅವಕಾಶ ಮಾಡಿಕೊಂಡು 'ಭೌತ' ವ್ಯವಸ್ಥೆಯ ಮೂಲೋತ್ಪಾಟನೆಯಾಗಬೇಕು–ಎಂದು ಹೇಳುವ ಬೋವಾ, ತಾನೇ ಪ್ರತಿಪಾದಿಸುವ ಪುರುಷ ವಿಶಿಷ್ಟ ಪ್ರಜ್ಞೆಯ ಸಿದ್ಧಾಂತವನ್ನು ವಿರೋಧಿಸುತ್ತಾಳೆ.

ವರ್ಜೀನಿಯಾ ವುಲ್ಫ್

ವರ್ಜೀನಿಯಾ ವುಲ್ಫ್‌ಳ ಬರವಣಿಗೆಯ ಮುಖ್ಯ ಕೇಂದ್ರ 'ಮಹಿಳೆ' ಅವಳು ತನ್ನ ಬರವಣಿಗೆಗಳಲ್ಲೂ ಹಲವು ರೀತಿಯ ರಾಜಕೀಯ ಬೇಡಿಕೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಮುಂದಿಡುತ್ತಾಳೆ. 'ತಾಯಿಯರಿಗೆ ವೇತನ'ವೆಂಬ ಹೊಸರೀತಿಯ ಹಕ್ಕೊತ್ತಾಯ, ವಿವಾಹ ವಿಚ್ಛೇದನದ ಕಾನೂನಿನಲ್ಲಿ ಸುಧಾರಣೆ, ವಿದ್ಯಾಭ್ಯಾಸ ಮತ್ತು ಇಚ್ಛಿಸುವ ಉದ್ಯೋಗದ ಆಯ್ಕೆಗಾಗಿ ಮಹುಳೆಯರ ಹಕ್ಕುಗಳ ಸಮರ್ಥನೆ ಮುಂತಾದವು ಕಾಡುವ ಸಂಗತಿಗಳು. ಅಧ್ಯಯನದ ಶಿಸ್ತುಗಳಲ್ಲಿ.ಉದಾಹರಣೆಗೆ ವಿಜ್ಞಾನ ಕ್ಷೇತ್ರದಲ್ಲಿ, ಮಹಿಳೆಯರಿಗೆ ಸಂಬಂಧಪಟ್ಟಂತೆ ಬದಲಾವಣೆಗಳಾಗಬೇಕು. ಮಹಿಳೆಯರಿಗೆ ಪತ್ರಿಕೆ. ಮಹಿಳಾ ಕಾಲೇಜು, ಮಹಿಳೆಯರ ರಾಜಕೀಯ ಪಕ್ಷ ಮತ್ತು ಮಹಿಳೆಯರಿಗೆ ಕನಿಷ್ಠ ಕೂಲಿ ಮತ್ತು ಪಿಂಚಣಿ ಬೇಕು ಎಂಬುದು ಅವಳು ಎತ್ತುವ ಪ್ರಶ್ನೆಗಳು.

ವುಲ್ಫ್ ಸ್ತ್ರೀವಾದಕ್ಕೆ ನೀಡಿರುವ ಗಮನರ್ಹ ಕೊಡುಗೆಯೆಂದರೆ, ಲಿಂಗಪ್ರಭೇದವು ಸಮಾಜದಲ್ಲಿ ಸಾಂಸ್ಕೃತಿಕವಾಗಿ ರೂಪಿಸಿದ ಅಂಶವಾಗಿದೆ, ಅದನ್ನು ಪ್ರಶ್ನಿಸಬಹುದು. ಬದಲಾಯಿಸಬಹುದು ಎಂಬುದು. ಲಿಂಗತಾರತಮ್ಯವು ಪಿತೃಪ್ರದಾನ ಕುಟುಂಬಗಳಲ್ಲಿ ಬಹುಬೇಗ ಆರಂಭವಾಗುತ್ತದೆ. ಅವಳ ಬಹು ಜನಪ್ರಿಯ ಕೃತಿ ಎ ರೋಮ್ ಅಫ್ ಒನ್ಸ್ ವೋನ್ ನಲ್ಲಿ ವುಲ್ಫ್, ಪುರುಷರು ಹೇಗೆ ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಮಹಿಳೆಯರ ಮೇಲೆ ಆಧಿಪತ್ಯ ಸ್ಥಾಪಿಸುತ್ತಾರೆ, ಎಂಬುದನ್ನು ವಿವರಿಸುತ್ತಾಳೆ. ಮಹಿಳೆಯರು 'ಕನ್ನಡಕ' ವಿದ್ದಂತೆ. ಪುರುಷರು ಮಹಿಳೆಯರನ್ನು 'ಬೇರೆ'ಯವರಂತೆ ಭಾವಿಸುತ್ತಾರೆ ಮತ್ತು ಪುರುಷರು ತಮ್ಮನ್ನು ಹೇಗೆ ಕಾಣಬೇಕೆಂದು ಬಯಸುತ್ತಾರೋ, ಆ ರೀತಿ ಪ್ರತಿಬಿಂಬಿಸುತ್ತಾರೆ. ಎ ರೋಮ್ ಆಫ್ ಒನ್ಸ್ ವೋನ್ ನಲ್ಲಿ ಮಹಿಳೆಯರು ಹೇಗೆ ತಮಗೆ ತಾವೇ ಬಲಿಪಶುಗಳಾಗುತ್ತಾರೆ ಮತ್ತು ಪುರುಷರಿಗೆ ಕನ್ನಡಿಗಳಾಗಿ ಸಮಾಜವನ್ನು ಎತ್ತಿ ನಿಲ್ಲಿಸುತ್ತಾರೆ. ಮಹಿಳೆಯರ ಕೌಟುಂಬಿಕ ಭೌತಿಕ ಮತ್ತು ಸೈದ್ಧಾಂತಿಕ ಆಧಿಪತ್ಯವಾಗಿದೆ ಎಂಬುದನ್ನು ಸೂಚಿಸಲಾಗಿದೆ.

ಅಡಿ ಟಿಪ್ಪಣಿಗಳು

1. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ – ಬರಗೂರು ರಾಮಚಂದ್ರಪ್ಪ
2. ಶಿವಶರಣೆಯ ವಚನಗಳು – ಸಂ.ಆರ್.ಸಿ ಹೀರೇಮಠ್– ಪುಟ –49
3. ಹದಿಬದೆಯ ಧರ್ಮ – ಸಂಚಿ ಹೊನ್ನಮ್ಮ, ಪುಟ –56
4. ದಿ ಸೆಕೆಂಡ್ ಸೆಕ್ಸ್ – ಸಿಮೋನ ದಿ ಬೋವಾ
5. The Voyage Out - ವರ್ಜೀನಿಯಾ ವುಲ್ಫ್

   (ಸ್ತ್ರೀವಾದಿ ಪ್ರವೇಶಿದುವಿಕೆ)

ಅಧ್ಯಾಯ–3

ಎನ್. ಗಾಯಿತ್ರಿಯವರ ಸೃಜನ ಶೀಲ ಸಾಹಿತ್ಯದಲ್ಲಿ ಮಹಿಳಾ ಚಿಂತನೆ

ಅಧ್ಯಾಯ–3

ಎನ್. ಗಾಯಿತ್ರಿಯವರ ಸೃಜನ ಶೀಲ ಸಾಹಿತ್ಯದಲ್ಲಿ ಮಹಿಳಾ ಚಿಂತನೆ

ಪ್ರಪಂಚದಲ್ಲಿ ತಲ್ಲಣಗಳು ಸಮಸ್ಯೀಕರಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಅವುಗಳಿಗೆ ಮುಖಾಮುಖಿಯಾಗುತ್ತಾ ಸೃಜನಶೀಲ ಪ್ರಪಂಚದಲ್ಲಿ ಅದಕ್ಕೆ ಪ್ರತಿ ಉತ್ತರ ನೀಡುವ ಕೆಲವೇ ಕೆಲವು ಲೇಖಕಿಯರಲ್ಲಿ ಎನ್. ಗಾಯಿತ್ರಿಯವರು ಪ್ರಧಾನವಾಗಿ ನಿಲ್ಲುತ್ತಾರೆ . ಅವರು ಬರೆದಿರುವ ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯಕ್ಕೆ ಬೆರಗಾಗುವಂತಹಾ ಪ್ರಶ್ನೆಗಳನ್ನು ಕೇಳಿದ್ದಾರೆ ಮಹಿಳಾ ಸಾಹಿತ್ಯದ ಹೊಸ ಸಾಧ್ಯತೆಯನ್ನು ದಿಟ್ಟ ಹೋರಾಟದ ಮೂಲಕ ನಿರೂಪಿಸಿದ್ದಾರೆ. ಅವರ ಸೃಜನಶೀಲ ಸಾಹಿತ್ಯದ ಪುಟ್ಟ ಆವರಣದಲ್ಲಿ ದಟ್ಟ ಅನುಭವವನ್ನು ಕಟ್ಟಿ ಕೊಡುತ್ತಾ ಸ್ತ್ರೀ ಸಂವೇದನೆಯ ಪಾರಮ್ಯಗಳನ್ನು ಪ್ರತಿಪಾದಿಸುತ್ತಾರೆ.

ಮಹಿಳೆಯ ಸ್ಥಿತಿಗತಿಗಳ ಕುರಿತು ಸಾಕಷ್ಟು ಚರ್ಚೆ, ಹೋರಾಟಗಳು ಇಂದು ಸಮಾಜದಲ್ಲಿ ನಡೆಯುತ್ತಿದೆ ಲೇಖಕಿಯರ ಬಿಚ್ಚು ಮಾತಿನಿಂದ ಪರಿಸ್ಥಿತಿಯ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ ಪರಿಸ್ಥಿತಿಯು ಹೆಚ್ಚು ಬದಲಾಗಿಲ್ಲವಾದರೂ ಚಿಂತನಮಂಥನಗಳಿಗೆ ದಾರಿ ಮಾಡಿಕೊಟ್ಟಿದೆ ಎಂಬುದು ವಿಹಿತ

ಪುರುಷರಷ್ಟೆ ಸಮಾನವಾಗಿ ದುಡಿಯುವ ಹಕ್ಕು ಮಹಿಳೆಯರಿಗಿದೆ. ಈಗ ದುಡಿಯುತ್ತಿರುವ ಮಹಿಳೆಯರು ದುಡಿಯುವ ಹಕ್ಕಿನ ಬಗೆಗೆ ಇತರ ಮಹಿಳೆಯರಲ್ಲಿ ಎಚ್ಚರವನ್ನು ಮೂಡಿಸುವ ಪ್ರಯತ್ನ ಮಾಡಬೇಕೆಂದು ಎನ್. ಗಾಯಿತ್ರಿಯವರ ಆಶಯ. ಸಂಪ್ರದಾಯ ಬದ್ಧವಾದ ಸಮಾಜದಲ್ಲಿನ ಅನೇಕ ಕಟ್ಟು ಪಾಡುಗಳನ್ನು, ಅವರು ಪ್ರಶ್ನಿಸುವುದನ್ನು ಕಾಣಬಹುದಾಗಿದೆ.

ಮಹಿಳೆಯರನ್ನು ಪ್ರಸ್ತುತ ಸ್ಥಿತಿಯಿಂದ ಮೇಲೆತ್ತಲು ಇತಿಹಾಸದುದ್ದಕ್ಕೂ ನಡೆಸಲಾದ ಸುಧಾರಣಾ ಕ್ರಮಗಳನ್ನು ಗುರುತಿಸುವ ಮೂಲಕ ಇಂದಿನ ಮಹಿಳೆಯರು ಪ್ರಸ್ತುತ ಸ್ಥಿತಿಯಿಂದ ಹೊರಬರಬೇಕೆಂದು ಸೂಚ್ಯವಾಗಿ ಕರೆ ನಿಡುತ್ತಾರೆ.ಮಹಿಳೆಯರ ಸ್ಥಿತಿಗತಿ, ಚಳುವಳಿಗಳ ಕುರಿತು ಇನ್ನಷ್ಟು ಸೈದ್ಧಾಂತಿಕ ಅಧ್ಯಯನಕ್ಕೆ ಈ ಕೃತಿ ಮೂಲವಾಗಬಲ್ಲದು, ಸರಳ ಭಾಷೆ, ಉತ್ತಮವಾದ ವಿಷಯಾಂಶಗಳು.

ಸಮಷ್ಟಿಯಲ್ಲಿ ಹೆಣ್ಣಿನ ಒಟ್ಟು ಸ್ಥಿತಿಯನ್ನು ಗ್ರಹಿಸಿ ಚರ್ಚಿಸಲಾಗಿದೆ. ಹೇಳುವ ದಾಟಿ ವರದಿಯ ಕ್ರಮದಲ್ಲಿದೆ ಆದ್ದರಿಂದ ಇದು ಸಾಮಾಜಿಕವಾಗಿ ಅಧ್ಯಯನ ಒಂದು ಉಪಯುಕ್ತವಾಗಿದೆ. ಸಮಗ್ರ ಭಾರತದಲ್ಲಿ ಇಂದು ನಡೆಯುತ್ತಿರುವ ಮಹಿಳಾ ಚಳುವಳಿಯನ್ನು ಸೈದ್ಧಾಂತಿಕವಾಗಿ ವಿವರಿಸಿ ಈ ವಿಚಾರದಲ್ಲಿ ಸಾಮಾಜಿಕ ಅಧ್ಯಯನದ ಅವಶ್ಯಕತೆಯನ್ನು ಸೂಚಿಸುತ್ತದೆ.

ಭಾರತೀಯ ಸಂವಿಧಾನ ಮತ್ತು ಕಾನೂನುಗಳ ಚೌಕಟ್ಟಿನಲ್ಲಿ ಹೆಣ್ಣಿನ ಹಕ್ಕು ಬಾಧ್ಯತೆಗಳನ್ನು ವಿವರಿಸುತ್ತಾ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಬೆಳೆದು ಬಂದ ಅನೇಕ ಕಂದಾಚಾರಗಳನ್ನು ಲೇಖನದ ಮೂಲಕ ಇಲ್ಲಿ ಪ್ರಶ್ನಿಸುತ್ತಾರೆ. ಮಧ್ಯಮ ವರ್ಗದ ಹೆಣ್ಣಿನ ಅನೇಕ ಚಿಂತನೆಗಳು ಹೊಟ್ಟೆ ತುಂಬಲು ಕೂಲಿ ಅನಿವರ್ಯವಾಗುವ ಹೆಣ್ಣಿನ ಅನೇಕ ಚಿಂತನೆಗಳು ಹೊಟ್ಟೆ ತುಂಬಲು ಕೂಲಿ ಅನಿವಾರ್ಯವಾಗುವ ಹೆಣ್ಣಿನ ಸ್ಥಿತಿಯಲ್ಲಿ ಹೇಗೆ ಅಪ್ರಸ್ತುತ ಎಂಬುದನ್ನು ಇಲ್ಲಿ ಚರ್ಚಿಸುತ್ತಾರೆ. ಹೀಗೆ ನಮ್ಮ ಸಮಾಜದ ಮಹಿಳಾ ಸಮಸ್ಯೆಗಳ ಬಗ್ಗೆ ವೈಜ್ಞಾನಿಕ ಚಿಂತನೆಯನ್ನು ಪ್ರೇರೇಪಿಸುವಂತಹದು ಎನ್ ಗಾಯಿತ್ರಿಯವರ ಸಾಹಿತ್ಯ.

ಹೆಣ್ಣನು ವಿವಿಧ ಬಂಧನಗಳಲ್ಲಿ ಸಿಲುಕಿಸಿ ಅವಳ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವಳನ್ನು ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ಮಾಡಲಾದ ಪ್ರಕ್ರಿಯೆಯೊಂದನ್ನು ಅದರ ಬೆಳವಣಿಗೆಯನ್ನು ಹೆಣ್ಣಿನ ಸಮಾನವಾದ ವಿವಿದ ಅಸ್ತ್ರಗಳನ್ನು ಸಮಸ್ಯೆ ಹಾಗೂ ಸ್ವರೂಪಗಳನ್ನು ವಿಶ್ಲೇಷಿಸುವ ಹಾಗೂ ಮಹಿಳೆಯ ಸಮಸ್ಯೆ ಹಾಗೂ ವಿಮೋಚನೆಯ ಹಾದಿಯನ್ನು ಐತಿಹಾಸಿಕವಾಗಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕಂಡುಕೊಳ್ಳುವ ಪ್ರಾಮಾಣಿಕತೆಯನ್ನು ಗಾಯಿತ್ರಿಯವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ವೇದ ಕಾಲೀನ ಮಹಿಳೆಯ ಸ್ಥಾನಮಾನದೊಂದಿಗೆ ಅಧುನಿಕ ಮಹಿಳೆಯು ಎದುರಿಸುತ್ತಿರುವ ಸಮಸ್ಯೆಗಳ ಕಡೆಗೆ ನಮ್ಮ ಗಮನ ಸೆಳೆಯುತ್ತ ಮಹಿಳೆಗೆ ತೊಡಿಸಿದ ಸಂಕೋಲೆಗಳು ಇನ್ನೂ ಕಳಚಬೇಕಾಗಿರುವ ಅವಶ್ಯಕತೆಯನ್ನು ಲೇಖಕಿ ಚಿತ್ರಿಸಿ, ನಿರ್ಲಪ್ತವಾಗಿ, ನಿಷ್ಪಕ್ಷಪಾತತನದಿಂದ ವಸ್ತುವನ್ನು ನೋಡಿದ್ದಾರೆ.

ಭಾರತೀಯ ಮಹಿಳೆ ತುಳಿದ ದಾರಿ ಸಂಘರ್ಷದ, ದುರ್ಗಮ ದಾರಿ, ಬಾಲ್ಯ ವಿವಾಹ, ಬಹುಪತ್ನಿತ್ವ, ಸತಿ ಪದ್ದತಿ, ನಿಯೋಗ, ಪರದಾ ಪದ್ಧತಿ, ಬಲಾತ್ಕಾರ ಹೀಗೆ ಹಲವು ಹದಿನೆಂಟು ಸಮಸ್ಯೆಗಳ ಸುಳಿಯಲ್ಲಿ ಭಾರತೀಯ ಮಹಿಳೆ ನಲುಗಿದ್ದಾಳೆ ಇನ್ನು ನಲುಗುತ್ತಿದ್ದಾಳೆ.

21 ನೇ ಶತಮಾನಕ್ಕೆ ಧಾವಿಸುತ್ತಿರುವ ಹೆಣ್ಣನ್ನು ಇಂದಿಗೂ ಕೇವಲ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಬಂದಿಸಿದ್ದಾರೆ ಮದುವೆಯ ಚೌಕಟ್ಟಿನೊಳಗೆ ಕ್ರೌರ್ಯ. ವಂಚನೆಗೆ ಒಳಗಾಗುವ ಹೆಣ್ಣುಗಳು ದಿನದಿನಕ್ಕೂ ಕುಬ್ಜರಾಗಿ ದನಿಯಿಲ್ಲದವವರಾಗಿದ್ದಾರೆ.

ಗಂಡಂದಿರ ಹೊಡೆತದಿಂದ ಮಾತ್ರ ವಿಮೋಚನೆ ಪಡೆದಿರುವುದಿಲ್ಲ ವಂಶದ ಜ್ಯೋತಿಯಾಗುದೆಂಬ ಭ್ರಮೆಯಲ್ಲಿ ಇರುವವರಿಗೆ ಗಂಡು ಸಂತಾನ ಜನಿಸದಿರಲು ಅದಕ್ಕೆ ಮಹಿಳೆಯನ್ನೇ ಬಲಿ ತೆಗೆದುಕೊಳ್ಳಲಾಗುತ್ತದೆ, ಪುತ್ರ ಫಲಾಪೇಕ್ಷೆಯ ತೊಳಲಾಟ ಇಂದು ಮಾನವ ಸಮಾಜವನ್ನು ಲಿಂಗಾನುಪಾತದ ಅಸಮಾನತೆಯ ಅಪಾಯದ ಅಂಚಿಗೆ ತಂದು ನಿಲ್ಲಿಸಿದೆ. ಇತ್ತೀಚಿಗೆ ಹೆಚ್ಚುತ್ತಿರುವ ಹೆಣ್ಣು ಭ್ರೂಣ ಹತ್ಯೆಗೆ ಆವಿಷ್ಕಾರಗೊಂಡಿರುವ ವಿಜ್ಞಾನವೂ ಕಾರಣವಾಗಿರುವುದು ವಿಪರ್ಯಾಸವೇ ಸರಿ.

ವಿವಾಹ: ಮನುಷ್ಯನ ಮುಖ್ಯ ಪ್ರವೃತ್ತಿಗಳಲ್ಲೊಂದಾದ 'ಕಾಮ' ಅದರ ಪೂರೈಕೆಗಾಗಿ ಸೃಷ್ಟಿಯಾಗುವ ಗಂಡು ಹೆಣ್ಣಿನ ಸಂಬಂಧವು ಇವು ಸಂಸ್ಥೀಕರಣಗೊಂಡಾಗ ಮೂಡುವ ಪದ್ದತಿಯೇ 'ವಿವಾಹ' ಹಿಂದೆಲ್ಲಾ ಸಮಾಜದಲ್ಲಿ ಬಳಕೆಯಲ್ಲಿದ್ದ ವಿವಾಹದ ರೀತಿ, ಸ್ವರೂಪಗಳು ಮಹಿಳೆಯ ಸ್ಥಾನಮಾನವನ್ನು ತೋರಿಸುತ್ತಿವೆ.

"ಲೈಂಗಿಕ ಪ್ರಶ್ನೆಯನ್ನು ಹೋಂದಿರುವ ದಾಂಪತ್ಯ ನೀತಿ ಬಲು ಜಿಗುಪ್ಸೆ ಸಮಸ್ಯೆ. ನಮ್ಮ ಸಮಾಜದ ಮನುಧರ್ಮರುಗಳು, ಅರ್ವಾಚೀನ ನೀತಿಕಾರನೂ ಬಣ್ಣಿಸುವಷ್ಟು ಸುಲಭದಲ್ಲಿ ಖಂಡ ನಿಯಮಗಳನ್ನು ಹಿಂಬಾಲಿಸುವ ಪ್ರಶ್ನೆ ಅದಲ್ಲ ಎಂಬ ಅಭಿಪ್ರಾಯ ಡಾ॥ ಎನ್ ಗಾಯಿತ್ರಿಯವರನ್ನು ಈ ಮಾತುಗಳು ದಾಂಪತ್ಯ ನೀತಿಯು ಅಪೇಕ್ಷಿಸುವ ಸ್ವಾತಂತ್ರ್ಯವನ್ನು ಹಾಗೂ ಮಾನವೀಯ ನೆಲೆಯನ್ನು ಪ್ರಸ್ತಾಪಿಸುತ್ತದೆ, ವಾಸ್ತವದಲ್ಲಿ ಇಂತಹ ಲೈಂಗಿಕ ಸ್ವಾತಂತ್ರ್ಯದ ನೀತಿಯು ಬಹಳಷ್ಟು ಬಾರಿ ಏಕಪಕ್ಷೀಯವಾಗಿರುತ್ತದೆ.

ಗಂಡಿನ ಪರವಾಗಿ ವಕಾಲತ್ತುವಹಿಸುತ್ತದೆ, ಮನುಷ್ಯನ ಮುಖ್ಯ ಪ್ರವೃತ್ತಿಗಳಲ್ಲೊಂದಾದ 'ಕಾಮ' ಅದರ ಪೂರೈಕೆಗಾಗಿ ಸೃಷ್ಟಿಯಾಗುವ ಗಂಡು ಹೆಣ್ಣಿನ ಸಂಬಂಧ ಇವು ಸಂಸ್ಥೀಕರಣಗೊಂಡಾಗ ಸೃಷ್ಟಿಯಾಗುವ ಸಮಸ್ಯೆಗಳು ಅಪಾರ ವಿವಾಹ ಸಂಸ್ಥೆ ಹೊರಿಸುವ ಹತ್ತು ಹಲವಾರು ಬಿಗಿ ನಿಯಮಗಳು ತೊಡಗಿಸುವ ಅನೇಕ ಸಂಪ್ರದಾಯದ ಸಂಕೋಲೆಗಳು ಸಮಾಜದ ಮುಗ್ಧ ಜೀವಿಗಳನ್ನು ಬಲಿತೆಗೆದುಕೊಳ್ಳುವ ರೀತಿ ಊಹೆಗೂ ನಿಲುಕದ್ದು.

ಹೆಣ್ಣಿನ ಬದುಕಿನಲ್ಲಿ ವಿವಾಹವೆನ್ನುವುದು ಮಹತ್ತರ ಬದಲಾವಣೆಗಳನ್ನು ತರುವ ಘಟನೆ ಹೆಣ್ಣಿನ ಆಸೆ ಆಕಾಂಕ್ಷೆಗಳು, ಕಲಿಕೆ ಸಾಮರ್ಥ್ಯಗಳು ಸೃಜನಶೀಲತೆಯ ಅಳಿವು-ಉಳಿವು ಬಹಳಷ್ಟು ಬಾರಿ ವಿವಾಹವನ್ನು ಅವಲಂಬಿಸಿರುತ್ತದೆ ಹೆಣ್ಣು ಮದುವೆಯಾಗುವುದು ಬರಿ ಗಂಡನನ್ನಲ್ಲ ಅವನ ಇಡೀ ಕುಟುಂಬವನ್ನು ಆದರೆ ಗಂಡಿನ ಪಾಲಿಗೆ ಇದು ಹಾಗಾ ಬೇಕೆಂದೇನೂ ಇಲ್ಲ ಬಯಸಲಿ ಬಯಸಿದಿರಲಿ ವಿವಾಹ ಹೆಣ್ಣಿನ ಪಾಲಿಗೆ ಬಂಧನವಾಗಿಯೇ ಪರಿಣಮಿಸುತ್ತದೆ. ಈ 'ಪವಿತ್ರ ಬಂಧನ ಪ್ರೇಮ ಬಂಧನವೂ ಆಗಬೇಕಾದರೆ ಅದು ಅಪೇಕ್ಷೆ ಹೆಣ್ಣಿನ ಕಡೆಯಿಂದಲೇ ಹೆಚ್ಚಿರುತ್ತದೆ, ವೈವಾಹಿಕ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಎಷ್ಟೆ ಕಾನೂನುಗಳು ಬಂದರೂ ಒಟ್ಟಾರೆಯಾಗಿ ಸಮಾಜದಲ್ಲಿ ವಿವಾಹವನ್ನು ಕುರಿತಾದ ಪರಿಕಲ್ಪನೆ ಬದಲಾಗದಿದ್ದರೆ ಸಮಸ್ಯೆಗಳು ಸಂಪೂರ್ಣವಾಗಿ ಇಲ್ಲದಂತಾಗುವುದಿಲ್ಲ, ಆದ್ದರಿಂದ ಯಾವುದೇ ಸಮಾಜದಲ್ಲಿನ ವಿವಾಹದ ಚೌಕಟ್ಟು ಮಹಿಳೆಯರ ಸ್ಥಾನಮಾನದ ಸ್ವರೂಪ ಧೋರಣೆಗಳನ್ನು ರೂಪಿಸುವ ನಿರ್ಣಾಯಕ ಅಂಶವಾಗಿರುತ್ತದೆ.

"ಬಟ್ರೆಂಡ್ ರಸೆಲ್ ಹೇಳುವಂತೆ' ಒಳ್ಳೆಯ ವಿವಾಹದ ಜೀವಾಳವಿರುವುದು ಪರಸ್ಪರ ವ್ಯಕ್ತಿತ್ವಗಳಿಗೆ ನಿಡುವ ಗೌರವದಲ್ಲಿ ಇಬ್ಬರ ನಡುವಿರುವ ಆಳವಾದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ವ್ಯಕ್ತಿತ್ವಗಳು ಸಮ್ಮಿಳಿತಗೊಂಡು ಸ್ತ್ರೀ ಪುರುಷರ ನಡುವಣ ಪ್ರೀತಿಯು ಹೆಚ್ಚು ಫಲಕಾರಿಯಾಗಲು ಅಪಾರವಾದ ತ್ಯಾಗ ಮನೋಭಾವ ಅವಶ್ಯವಾಗುತ್ತದೆ. ಇಂತಹ ತ್ಯಾಗವು ಸ್ವಯಂ ಇಚ್ಚೆಯಿಂದ ಕೂಡಿರದಿದ್ದರೆ ಅದುಪ್ರೀತಿಯ ಆಸ್ತಿಭಾರವನ್ನು ನಾಶಮಾಡಿ ಬಿಡುತ್ತದೆ. ಈ ಮಾತುಗಳು ಯಾವುದೇ ದೇಶದ ಸಮಾಜಕ್ಕೂ ಅನ್ವಯಿಸುವ ಮಾತು.

ಹೆಣ್ಣಾಗಿ ಹುಟ್ಟಿದ್ದೇ ಸಮಸ್ಯೆಯಾಗಬಲ್ಲ ಪ್ರಸ್ತುತ ಪರಿಸ್ಥಿತಿಯಲ್ಲಿ ಅವಳು ಬೆಳೆದು ದೊಡ್ಡವಳಾಗಿ ಮುಪ್ಪಾಗುವ ತನಕ ಪುರುಷ ಕಾಣದ ಕೆಲವು ವಿಶಿಷ್ಟ ಅನುಭವಗಳನ್ನು ಪಡೆಯುತ್ತಾಳೆ, ಮುಪ್ಪು, ಗರ್ಭ, ಹೆರಿಗೆ ಮುಂತಾದವು ದೈಹಿಕ ವೈಶಿಷ್ಟ್ಯಗಳಾದರೆ ಲಜ್ಜೆ, ಭಯ, ಸಂಕೋಚ, ಕೀಳರಿಮೆ, ತಾಯ್ತನದ ಹೊಣೆ ಇವು ಬಹುತೇಕ ಪರಿಸರ ನಿರ್ಮಿತ ಇದು ಎನ್ ಗಾಯಿತ್ರಿಯವರ ವೈಯಕ್ತಿಕ ಅನಿಸಿಕೆ.

ಮದುವೆಯ ಚೌಕಟ್ಟಿನೊಳಗೆ ಕ್ರೌರ್ಯ, ವಂಚನೆಗೆ ಒಳಗಾಗುವ ಹೆಣ್ಣುಗಳು ದಿನದಿನಕ್ಕೂ ಕುಬ್ಜರಾಗಿ ದನಿಯಿಲ್ಲದವರಾಗುತ್ತಾರೆ. ಕೊಳಚೆ ಗುಡಿಸಲುಗಳ ಹೆಂಗಸರ ತಮ್ಮ ಅನ್ನವನ್ನು ತಾವೇ ಸಂಪಾದಿಸಿಕೊಳ್ಳುತ್ತಿದರೂ ಗಂಡಂದಿರ ಹೊಡೆತದಿಂದ ಮಾತ್ರ ವಿಮೋಚನೆ ಪಡೆದಿರುವುದಿಲ್ಲ ಈ ದೈಹಿಕ ಹೊಡೆತ ಅಪರೂಪದ ಒಂದು ಕ್ಷಣದ ಕೋಪದ ಪ್ರತಾಪವಲ್ಲ ಹೆಂಡತಿಯ ಮೇಲೆ ಅಧಿಕಾರ ಚಲಾಯಿಸಬಲ್ಲೆನೆಂಬ ಭಾವನೆಗೆ, ಒತ್ತು ಕೊಡುವ ಗಂಡ–ಹೆಂಡತಿ ಅಸಮತೋಲನ ಸಂಬಂಧಗಳು ಇವು ದೈಹಿಕ ಕ್ರೌರ್ಯವನ್ನು ನಿರ್ಲಕ್ಷ್ಯಕ್ಕೆ ಒಳಗಾಗುವ ಹೆಣ್ಣುಗಳು ವೈಯಕ್ತಿಕವಾಗಿ ತಮ್ಮತನವನ್ನು ಸ್ಥಾಪಿಸಿಕೊಳ್ಳಲು ಅಸಮರ್ಥರಾದಾಗ ಹತಾಶರಾಗುತ್ತಾರೆ.

ಹಾಗೂ ಯಾವುದೇ ಕೆಲಸ ಕಾರ್ಯಗಳು ಮಾಡುವಂತಹ ಸಂದರ್ಭದಲ್ಲೂ ಗಂಡನ ಅನುಮತಿಗೆ ಕಾಯುವವರು ಇದ್ದಾರೆ ಎಸ್ ಗಾಯಿತ್ರಿಯವರ ಇನ್ನೊಂದು ಮಾತು ಮಹಿಳೆಯು ಯಾವ ಪತ್ರಿಕೆಗೆ ಬರೆಯಬೇಕು ಎಂಬುದನ್ನು ವ್ಯಕ್ತಪಡಿಸಿದ್ದಾರೆ.

“ಭಾರತೀಯ ಮಹಿಳೆ ಆಧುನಿಕ ಭಾರತವನ್ನು ಮುನ್ನಡೆಸಿ ಆಳುವವಳಾಗಬೇಕು. 33% ಮೀಸಲಾತಿ ಕೊಡಹೊರಟಿರುವ ಭಾರತ ಜಗತ್ತಿಗೇ ದಾರಿದೀಪವಾಗಬೇಕು ಜೊತೆಗೆ ದಮನನಿರತ ಸಮುದಾಯಗಳಿಗೆ, ಮಹಿಳೆಯರಿಗೆ ಅಧಿಕಾರದಲ್ಲಿ ಪಾಲು ಕೊಡುವ ಮೀಸಲಾತಿ ವ್ಯವಸ್ಥೆ ವಿಶ್ವಕ್ಕೇ ಮೇಲ್ಪಂಕ್ತಿಯೆಂಬ ಮೆಚ್ಚುಗೆಯ ಮಾತು ಎಲ್ಲೆಡೆಯಿಂದ ಕೇಳಿಬಂದಿತ್ತು. ಅದು ಭಾರತೀಯ ಮಹಿಳೆಯ ಕನಸೂ ಹೌದು ಏಕೆಂದರೆ ಇಂದು ನಿನ್ನೆಯ ಮಾತಲ್ಲ ಸಾವಿರಾರು ವರ್ಷಗಳಿಂದ ಅವಳು ಆಳಿಸಿಕೊಳ್ಳುವರ್ಗಕ್ಕೆ ತಳಲ್ಪಟ್ಟಿದ್ದಾಳೆಯೇ ಹೊರತು ಆಳುವ ಮಹಿಳೆಯಾಗಿ ದೇಶ ಮುನ್ನಡೆಸಬಲ್ಲ ರಾಣಿಯರೆಂದರೆ ನಮ್ಮ ನೆನಪು ಝಾನ್ಸಿರಾಣಿ. ಕಿತ್ತೂರು ಚೆನ್ನಮ್ಮ, ಬೆಳವಾಡಿ ಮಲ್ಲಮ್ಮ, ರಜೀಯಾ ಸುಲ್ತನಾ. ಚೆನ್ನ ಬೈರಾದೇವಿ ತನಕ ಹೋಗಿ ಹಾಗೇ ನಿಲ್ಲುತ್ತದೆ ಸಹಸ್ರಮಾನ ಹಿಂದೆ ಹೋದರೆ ಅದು ಬರಿರಾಜರ ಕಥೆ ಮಹಿಳಾ ಸಂಕಥನ ದಮನಿರತ ಕಥನ.

ಮಹಿಳಾ ಮೀಸಲಾತಿ ಹಲವು ಮಜಲುಗಳನ್ನು ದಾಟಿ ಬಂದಿದೆ. ಮಹಿಳೆಯ ಬದುಕನ್ನು ಸಹನೀಯಗೊಳಿಸುವ ಕ್ರಮಗಳು ಸಂಘರ್ಷವಿಲ್ಲದೆ ಸಮಾಜ ಒಪ್ಪಿಗೆ ಪಡೆಯುತ್ತವೆ, ಎಲ್ಲಿ ಆಕೆಯನ್ನು ಬರೀ ಜೈವಿಕ ಮಹಿಳೆಯನ್ನಾಗಿ ನೋಡಲಾಗಿದೆಯೇ. ಎಲ್ಲಿ ಆಕೆ ಪಲಾನುಭವಿ ಮಾತ್ರವೋ ಅಂಥಕ್ರಮಗಳು ಸ್ವಾಗಿತಿಸಲ್ಪಡುತ್ತವೆ.

ಅದರೆ ಅವಳನ್ನು ನಾಗರಿಕ ವ್ಯಕ್ತಿಯಾಗಿ ಪರಿಗಣಿಸಿ ಅಧಿಕಾರ ಮರು ಹಂಚಿಕೆಯಾಗಬೇಕಾದಾಗ ವಿವಾದ ಶುರುವಾಗುತ್ತದೆ. ಇದರ ಯಾವುದರ ಸಂಘರ್ಷವಿಲ್ಲದೆ ಜನರನ್ನು ನಿಯಂತ್ರಿಸುವುದೇ ಅದರ ಮುಖ್ಯ ಗುರಿಯಾಗಿ ಎಂದಿಗೂ ಸುಧಾರಣಾ ನೆಲೆಯಲ್ಲಿಯೇ ಯೋಚಿಸುತ್ತದೆ. ಈಗ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆಯರ ಪ್ರಾತಿನಿಧ್ಯಕ್ಕೆ

ಧಕ್ಕೆ ಬರುವುದೆಂದು ಮಹಿಳಾ ಮೀಸಲಾತಿ ಮಸೂದೆ ನೆನಗುದಿಗೆ ಈ ಒಳಸುಳಿಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ. ಸ್ವಸಹಾಯ ಸಂಘಗಳು ಹಾಗೂ ಮಹಿಳಾ ಮೀಸಲಾತಿ ಪ್ರಣೀತ ರಾಜಕೀಯ ಪ್ರವೇಶ ಈ ಎರಡರಿಂದಲೂ ಹಿಂದೆಯೂ ಕನಸಿದಿದ್ದ ಜಗತ್ತನ್ನು ಮಹಿಳೆ ಕಾಣತೊಡಗಿದಾಗಲೆ, ಅದರಲ್ಲೂ ಗ್ರಾಮೀಣ ಪ್ರದೇಶದ, ಅಷ್ಟೇನೂ ಪರಿಣತ ಕಲಿಕೆಯಿಲ್ಲದವರೂ ಧೈರ್ಯವಾಗಿ ನಿಲ್ಲಬಲ್ಲಷ್ಟು ಆಶಾ ಭಾವನೆ ಬೆಳೆಸಿಕೊಂಡಿದ್ದಾರೆ. ಬೇಲಿ ಬದಿಯ ಉಳಿದೆಲ್ಲ ಮಾತುಕತೆಗಳ ಜೊತೆಗೆ ರಾಜಕೀಯದ, ಜಾತಿಯ ಗಹನ ಲೆಕ್ಕಚಾರಗಳನ್ನು ಹಳ್ಳಿಯ ಹೆಣ್ಣುಮಕ್ಕಳ ತಲೆಯೇರಿ ಕುಳಿತಿವೆ ದರಪು ಗುಡಿಸುತ್ತ ಕಟ್ಟಿಗೆ ಕಡಿಯುತ್ತ, ಹೊಲಗದ್ದೆ, ಮನೆಗೆಲಸ ಮಾಡುತ್ತ ಬಳಿ ಪಿರಿ ಪರಿಗೈದು ಹೇಗೋ ಸಂಸಾರ ತೂಗಿಸಿಕೊಂಡು ಹೋಗುತ್ತಿದ್ದ ಮುಗುದೆಯ ತಮ್ಮ ಸಹಿ, ಅದಕ್ಕಿರುವ ಪ್ರಾಮುಖ್ಯತೆ ದುಡ್ಡು ಗಳಿಸಲಿರುವ ಎಷ್ಟೆಷ್ಟೋ ಹಾದಿಗಳು ಇವೆಲ್ಲವುಗಳಿಗೆ ಬೆರಗಿನಿಂದ ತೆರೆದುಕೊಳ್ಳತೊಡಗಿದ್ದಾರೆ. ನಮ್ಮೂರ ಪಂಚಾಯ್ತಿ ಅಧ್ಯಕ್ಷೆಯಾದ ಕೃಷಿ ಕಾರ್ಮಿಕಳಾಗಿದ್ದ ಮಾಸ್ತಿ ಹೇಳಿದಂತೆ, "ನಾ ಅಲ್ಲೀವರ್ಗೂ ಕುರ್ಚಿ ಮ್ಯಾಲೆ ಕುಂತೇ ಇರ್ಲಿಲ್ಲ, ಕಲ್ಲಾದ್ರೂ ಇರ್ಲಿ. ಕೆಸರಾದ್ರೂ ಇರ್ಲಿ, ನಮ್ದು ಯಾವತ್ತೂ ನೆಲನೇ ಈಗ ಎಲ್ಲ ಬದಲಾಗದೆ ಎಲರ್ಲ ಜೊತೆ ಕುರ್ಚಿ ಮ್ಯಾಲೆ ಕುಂತಾಯ್ತು .

ಹುಬ್ಬಳ್ಳಿ, ಕಾರವಾರ, ಬೆಂಗಳೂರು ಅಂತ ಊರೂರು ತಿರ್ಗಿ ಸೋನ್ಯಾಗಾಂಧಿನೂ ನೋಡಾಯ್ತು, ನಿಜಕ್ಕೂ ಎಲ್ಲ ಸಪ್ನ ಅನುಸ್ ಬಿಟ್ಟಿದೆ ಹೌದು ಗ್ರಾಮೀಣ ಮಹಿಳೆಯರಿಗೆ ಸಿಕ್ಕ ಅಧಿಕಾರ ಅವರು ಕನಸಿನಲ್ಲೂ ಊಹಿಸಲಾಗದ ಸವಲತ್ತು ಅದೊಂದು ಪವಾಡವೇ ಆದರೆ ಏನೇನು ತಮಗಾಗಿ ಲಭ್ಯವಿದೆ ಎಂಬುದು ತಿಳಿಯ ತೊಡಗಿದವಷ್ಟೆ ಸಲೀಸಾಗಿ ಏನು ಮಾಡಬೇಕಿದೆ ಎನ್ನುವ ಕರ್ತವ್ಯ ಪ್ರಜ್ಞೆಯೂ ಅವರಲ್ಲಿ ಬಂದಿದೆಯೆ? ಯಾವುದು ಮೊದಲು ಅಧಿಕಾರ ಅಥವಾ ಅಧಿಕಾರದ ಅರಿವು? ಹಕ್ಕುಪ್ರಜ್ಞೆ ಅಥವಾ ಕರ್ತವ್ಯದ ಅರಿವು? ಈ ಎಲ್ಲದರ ಹಿನ್ನೆಲೆಯಲ್ಲಿ ಡಾ॥ ಎನ್ ಗಾಯಿತ್ರಿ ಅವರು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನೂ ಸಮರ್ಥವಾಗಿ ನಿಡಿದ್ದಾರೆ.

1991 ರ ಸೆಪ್ಟೆಂಬರ್ 1 ರಂದು ಕರ್ನಾಟಕ ರಾಜ್ಯ ಸರ್ಕಾರ ಸಾರ್ವಜನಿಕ ಸಾರಿಗೆ ಬಸ್ಸುಗಳಲ್ಲಿ ಮಹಿಳೆರಿಗೆ ಮೀಸಲಾತಿ ಘೊಷಿಸಿದಂದಿನಿಂದ ಬಸ್ಸಿನಲ್ಲಿ ಸಂಚಾರ ಮಾಡುವ ಸ್ತ್ರೀ ಪುರುಷರಲ್ಲಿ ಒಂದು ರೀತಿಯ ಪರಸ್ಪರ ದ್ವೇಷ, ಅಸೂಯೆ ಹಾಗೂ ವೈಮನಸ್ಯ ಹೆಚ್ಚಾಗಲು ಕಾರಣವಾಗಿದೆ.

ಇಂದು ದುಡಿಯುತ್ತಿರುವ ಮಹಿಳೆಯ ಸಂಖ್ಯೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ ಖಾಸಗಿ ವಾಹನಗಳನ್ನು ಬಳಸುವ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗೆ ಹೋಲಿಸಿದರೆ ಕಡಿಮೆಯೆ ಇಂತಹ ಸಂದರ್ಭದಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮುಖ್ಯವಾಗಿ ಅವಲಂಬಿಸಿರುವ ಮಹಿಳೆಯರು ಕೆಲವೊಂದು ಅಪೇಕ್ಷಿಸಿ ಸೌಲಭ್ಯಗಳನ್ನು ಸಾರ್ವಜನಿಕ ಜೀವನದಲ್ಲಿ ಬಯಸಿದರೆ ಅದೊಂದು ದೊಡ್ಡ ಪ್ರಮಾದವಾಗಬೇಕಿಲ್ಲ ಹೆಣ್ಣಿಗೇ ವಿಶಿಷ್ಟವಾದ ದೈಹಿಕ ಬೇನೆಗಳಿಂದ ನರಳುತ್ತಿರುವವರಲ್ಲಿ ಮುಟ್ಟು, ಬಸಿರು, ಬಾಣಂತನದ, ತಾಪತ್ರಯಕ್ಕೆ ಸಿಕ್ಕಿ ಆಯಾಸ ಪಡುವ ಹೆಂಗಸರು ಬಸ್ಸಿನಲ್ಲಿ ಕೂಡಲು ಸ್ಥಳ ಬಯಸಿದರೆ ತಪ್ಪೆ?

ದೇಶದ ಹಲವಾರು ರಾಜ್ಯಗಳಲ್ಲಿ ಬಸ್‌ಗಳಲ್ಲಿ ಸ್ತ್ರೀಯರಿಗಿರುವ ವಿಶೇಷ ವ್ಯವಸ್ಥೆಯು ಸಾಕಷ್ಟು ಯಶಸ್ವಿಯಾಗಿದ್ದು ಅದು ಆ ನೆಲದ ಸಂಸ್ಕೃತಿಯ ಬಾಗವಾಗಿದೆಯೇ ಮೂಡಿ ಬಂದಿದೆ ಆದರೆ ಕರ್ನಾಟಕದಲ್ಲಿ ಮಾತ್ರ ಸಾರ್ವಜನಿಕ ಜೀವನವನ್ನು ಹೆಚ್ಚಾಗಿ ಮಹಿಳೆಯರು ಪ್ರವೇಶಿದುತ್ತಿರುವುದರಿಂದ ಉಂಟಾಗುತ್ತಿರುವ ಸಾಮಾಜಿಕ ಬದಲಾವಣೆಗೆ ಸ್ಪಂದಿಸಲು ಆಗದೆ ಇಲ್ಲದ ಪುರುಷ ಸಮುದಾಯದ ಒಂದು ವರ್ಗಕ್ಕೆ ಉಂಟಾಗಿರುವ ಅಸಮಾಧಾನವು ಇದಕ್ಕೆ ಕಾರಣವಾಗಿದೆ ಸಾಮಾನ್ಯವಾಗಿ ಇಂತಹದೊಂದು ವ್ಯವಸ್ಥೆಗೆ ವಿರೋದ ತೋರಿಸುತ್ತಿರುವವರು ಯುವಕರು ಹಾಗೂ ಬಿಸಿರಕ್ತದ ತರುಣರೋ ಆಗಿದ್ದಾರೆ ಇಂತಹದೊಂದು ಪ್ರತಿರೋಧನ ಹಿಂದೆ ಹಲವಾರು ಮಿಶ್ರ ಭಾವನೆಗಳು ಕೆಲಸ ಮಾಡುತ್ತಿರುತ್ತದೆ. ಸ್ತ್ರೀಯರು ತಮ್ಮ ಉದ್ಯೋಗವನ್ನು ಸಹಜವಾಗಿಯೇ ಸ್ತ್ರೀಯರು ತಮ್ಮ ಉದ್ಯೋಗವನ್ನು, ಸ್ಥಾನವನ್ನು ಕಸಿದುಕೊಳ್ಳಲು ಬಂದವರೆಂಬ ಅಸೂಯೆ ಒಂದೆಡೆಯಾದರೆ ಸಹಜವಾಗಿಯೇ ಸ್ತ್ರೀಯನ್ನು ಕುಳಿತರಾಗಿರುವ ಅಸಡ್ಡೆಯೂ ಮತ್ತೊಂದು ಮುಖ್ಯ ಕಾರಣವಾಗಿರುತ್ತದೆ. ಹಚ್ಚೆಂದರೆ ಕೇವಲ ಅರ್ಧ ತಾಸು ಕುಳಿತು ಕೊಳ್ಳಲು ಸ್ಥಳ ಕೊಡಲು ನಿರಾಕರಿಸುವ ಪುರುಷ ಪ್ರಯಾಣಿಕರು ಇನ್ನು ಜೀವನದಲ್ಲಿ ಅನುಭವಿಸುತ್ತಿರುವ ಸವಲತ್ತು & ಅಧಿಕಾರವನ್ನು ಹಂಚಿಕೊಳ್ಳಲು ಮುಂದೆ ಬರುವರೇ?

ಕರ್ನಾಟಕದಲ್ಲಿರುವ ಕೆಟ್ಟ ಸುರಿಗೆ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ತಾಸುಗಳ ಕಾಲ ಕುಳಿತು ಕೊಳ್ಳಲು ಸ್ಥಳ ಸಿಕ್ಕಿಬಿಟ್ಟರೆ ಅವರಿಗೆ ಅದು –ಜಯ ದೊರಕಿಬಿಟ್ಟಂತೆ. ಎಂದು ಹೇಳಲಾಗುವುದಿಲ್ಲ. ಆದರೆ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು ಕುರಿತು ಆಲೋಚನಾ ಕ್ರಮವು ತಳೆಯಬೇಕಾದ ಆರೋಗ್ಯಕರ ಮೌಲ್ಯಗಳನ್ನು ನಿರ್ದೇಶಿಸುವ ಹಾಗೂ ನಮ್ಮ ಸಂಸ್ಕೃತಿಯ ದಿಕ್ಕನ್ನು ಸೂಚಿಸುವ ಒಂದು ಚಿಕ್ಕ ಪ್ರಯತ್ನ ಇದಾಗುತ್ತದೆಂದು ಬಾವಿಸುವುದರಲ್ಲಿ ತಪ್ಪೇನಿಲ್ಲ.

"ಉದ್ಯೋಗಂ ಪುರುಷಲಕ್ಷಣಂ" ಎನ್ನುತ್ತದೆ ನಮ್ಮ ಭಾರತೀಯ ಸಮಾಜ ಆದರೂ ಇಲ್ಲಿ ಅನಾದಿ ಕಾಲದಿಂದಲು ಪುರುಷರೋಡನೆ ಮಹಿಳೆಯೂ ದುಡಿಯುತ್ತ ಬಂದಿದ್ದಾಳೆ 20 ನೇ ಶತಮಾನದಲಂತೂ ದುಡಿಯುವ ಮಹಿಳೆಯರ ಸಂಖ್ಯೇ ಹೆಚ್ಚುತಲ್ಲೇ ನಡೆದಿದೆ. ಈಗ ಭಾರತದಲ್ಲಿ ಒಟ್ಟು 90 ಮಿಲಿಯನ್ ದುಡಿಯುವ ಮಹಿಳೆಯರಿದ್ದಾರೆ. ಈ ದುಡಿಮೆಯ ರಂಗದಲ್ಲಿ ಹೆಣ್ಣಾಗಿ ಹುಟ್ಟಿರುವ ಕಾರಣದಿಂದಲೇ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಹಲವಾರಿವೆ. ರೂಪಾನ್ ಬಜಾಜ್ ನಂತಹ ಪೋಲೀಸ್ ಅಧಿಕಾರಿಣಿ ಇಂದ ಹಿಡಿದು ಸ್ವಯಂ ಸೇವಕಿಯಾಗಿ ಸಾಧ್ವಿನ್ ಕೆಲಸ ಮಾಡುತ್ತಿದ್ದ ಭಾಂಮ್ರಿ ದೇವಿಯವರೆಗೂ ಲೈಂಗಿಕ ಭಯೋತ್ಪಾದನೆ ಹಲವು ಸ್ಥರದಲ್ಲಿ ನಡೆಯುತ್ತಲೇ ಬಂದಿದೆ. ಇದುವರೆಗೂ ನಮ್ಮ ಕಾನೂನು ಈ ದಿಕ್ಕಿನಲ್ಲಿ ವಿಶೇಷವಾಗಿ ಕಾರ್ಯ ನಿರ್ವಗಹಿಸಲೇ ಇಲ್ಲ ಈಗ ತಡವಾಗಿಯಾದರೂ ನನ್ನ ಕಾನೂನು ಈ ದೆಸೆಯಂತ ಕಣ್ದೆರೆದಿದೆ. ಕಳೆದ ವರ್ಷಗಳಲ್ಲಿ ಸುಪ್ರೀಂ ಕೋರ್ಟ್ ದುಡಿಮೆಯ ಸ್ಥಳದಲ್ಲಿ ಹೆಣ್ಣಾಗುವ ಕಿರುಕುಳವನ್ನು ಕುರಿತಂತೆ ತನ್ನ ಒಂದು

ತೀರ್ಪಿನಲ್ಲಿ ಕೆಲವು ನಿರ್ದೇಶಗಳನ್ನು ಕೊಟ್ಟಿದೆ. ಭಾರತೀಯ ಸಮಾಜದ ದುಡಿಯುವ ಮಹಿಳಾ ಸಮುದಾಯಕ್ಕೆ ಇದೊಂದು ಚಾರಿತ್ರಾರ್ಹ ತೀರ್ಪೆ ಹೌದು.

ಈ ಚಾರಿತ್ರಿಕ ತೀರ್ಪಿನ ಲಾಭ ಪಡೆದ ಎರಡು ಪ್ರಕರಣಗಳೂ ಇಂದು ನಮ್ಮ ಮುಂದಿವೆ. ಇದು ಹೋರಾಟದ ಹಾದಿಯಲ್ಲಿರುವ ದುಡಿಯುವ ಮಹಿಳೆಗೆ ಭರವಸೆಯನ್ನು ಮತ್ತು ಆತ್ಮ ವಿಶ್ವಾಸವನ್ನು ತುಂಬುವುದರಲ್ಲಿ ಆಶ್ಚರ್ಯವಿಲ್ಲ ಇಬ್ಬರೂ ಮಕ್ಕಳ ತಾಯಿಯಾದ ಶಹನಾಜ್ ಸಾನಿ ಸೌದಿ ಅರೇಬಿಯನ್ ಏರ್‌ಲೈನ್ಸ್‌ನಲ್ಲಿ ಗಗನಸಖಿಯಾಗಿ ಕೆಲಸ ಮಾಡುತ್ತಿದ್ದಾಳೆ. ಅವಳು ತನ್ನ ಮೇಲಿನ ಅಧಿಕಾರಿಯ ಲೈಂಗಿಕ ದುರ್ವತನೆಯನ್ನು ತಿರಸ್ಕರಿಸಿ ಪ್ರತಿಭಟಿಸಿದಾಗ ಕೆಲಸ ಕಳೆದುಕೊಂಡಳು ನ್ಯಾಯಕ್ಕಾಗಿ ನ್ಯಾಯಲಯದ ಕದ ತಟ್ಟಿದಳು. ಬಿದ್ದವಳಿಗೆ ಮತ್ತೊಂದು ಗುದ್ದು ಎಂಬಂತೆ ಅವಳ ಪತಿ ಅವಳ ವಿರುದ್ಧ ವಿರುದ್ದವಾಗಿ ಸೌದಿ ಅರೇಬಿಯನ್ ಏರ್‌ಲೈನ್ಸ್‌ನೊಂದಿಗೆ ಕೈಜೊಡಿಸಿಯಾಗಿತ್ತು. ನ್ಯಾಯಾಲಯದ ನಿಧಾನ ನಡೆಯ 13 ವರ್ಷಗಳ ಹೋರಾಟದ ನಂತರ ಮುಂಬೈ ಹೈಕೋರ್ಟ್ ಸುಪ್ರೀಂ ಕೋರ್ಟಿನ ತೀರ್ಪನ್ನು ಅನ್ವಯಿಸಿ ಶಹನಾಜ್‌ಳಿಗೆ ನ್ಯಾಯ ದೊರಕಿಸಿದೆ. ಅವಳನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವುದಷ್ಟೇ ಅಲ್ಲದೆ ಇಷ್ಟು ದಿನ ಅವಳು ಅನುಭವಿಸಿದ ನಷ್ಟಕ್ಕೆ ಪರಿಹಾರವನ್ನು ನೀಡಿದೆ. ಈ ಎಲ್ಲಾ ಘಟನೆಗಳ ಹಿನ್ನಲೆಯಲ್ಲಿ ಕುಟುಂಬದ ಹೊರಗೆ ದುಡಿಯಲು ಬಂದ ಹೆಣ್ಣನ್ನು ಗೌರವಯುತವಾಗಿ ಕಾಣಬೇಕೆಂಬ ಆಶಯದೊಂದಿಗೆ ಅವಳ ಕಾರ್ಯವ್ಯಾಪ್ತಿಯನ್ನು ಹಿಗ್ಗಿಸುವ. ವ್ಯಕ್ತಿತ್ವದ ಆಯಾಮಗಳನ್ನು ವಿಶಾಲಗೊಳಿಸುವ ಆರೋಗ್ಯಕರ ನಿಲುವಿದೆ. ಆದ್ದರಿಂದ ಆರೋಗ್ಯವಂತ ಸಮಾಜದ ಎಲ್ಲರೂ ಸ್ವಾಗತಿಸಿ, ಸ್ವೀಕರಿಸಿ, ಪ್ರಸಾರ ಮಾಡಬೇಕಾದುದ್ದು ಇದಾಗಿದೆ

ಅಧ್ಯಾಯ–4
ಸಮಕಾಲೀನ ಮಹಿಳಾ ಲೇಖಕಿಯರ ಸಾಲಿನಲ್ಲಿ ಎನ್ ಗಾಯಿತ್ರಿಯವರ ಸಾಹಿತ್ಯ

ಅಧ್ಯಾಯ-4
ಸಮಕಾಲೀನ ಮಹಿಳಾ ಲೇಖಕಿಯರ ಸಾಲಿನಲ್ಲಿ ಎನ್ ಗಾಯಿತ್ರಿಯವರ ಸಾಹಿತ್ಯ

ಮಹಿಳೆಯರ ಸುಧಾರಣೆ, ಅವರ ಬಗೆಗಿನ ಸಾಮಾಜಿಕ ಕಳಕಳಿ ಇಂದು ದಿಡೀರಣೆ ಉದ್ಭವಿಸಿದ ಹೊಸ ಸಂಗತಿಯಲ್ಲಿ ಇದಕ್ಕೆ ಭಾರತದಲ್ಲಿ ನೂರೈವತ್ತು ವರ್ಷಗಳ ಇತಿಹಾಸವಿದೆ. ಆದರೆ ಈ ಸಮಸ್ಯೆಗಳನ್ನು ಗ್ರಹಿಸಿ, ಆ ಸಮಸ್ಯೆಗಳಿಗೆ ಮೂಲ ಕಾರಣಗಳೇನು ಕಂಡು ಹಿಡಿದು, ವ್ಯಾಖ್ಯಾನಿಸುವ & ಪರಿಹಾರ ಕಂಡುಕೊಳ್ಳುವ ಹಾಗೂ ತೌಲನಿಕವಾಗಿ ಅಧ್ಯಯನ ನಡೆಸುವ ಬಗೆಯಲ್ಲಿ ಕಾಲದಿಂದ ಕಾಲಕ್ಕೆ ವ್ಯತ್ಯಾಸಗಳಿಗೆ ಮಹಿಳೆಯರ ಪರವಾದ ಪುರುಷ ನೇತೃತ್ವದ ಸುಧಾರಣ ಚಳುವಳಿ, ಮಹಿಳೆರನ್ನು ಒಳಗೊಂಡ ಸಾಮೂಹಿಕ ಚಳುವಳಿ ಮತ್ತು ಸ್ತ್ರೀವಾದಿ ಅರಿವಿನಿಂದ ರೂಪುಗೊಳ್ಳುತ್ತಿರುವ ಸಮಕಾಲೀನ ಚಳುವಳಿ ಎಂದು ಸ್ಥೂಲವಾಗಿ ಮೂರು ಹಂತಗಳನ್ನು ಈ ನೆಲದಲ್ಲಿ ಗುರುತಿಸಬಹುದು ವರ್ತಮಾನದಲ್ಲಿ ಭಾರತೀಯ ಸಾಂಸ್ಕೃತಿಕ ಹಿನ್ನೆಲೆಯಿಂದ ಸ್ತ್ರೀವಾದವನ್ನು ಕುರಿತು ಚರ್ಚಿಸುವಾಗ ಅದರ ಹಿಂದಿನ ಈ ಚಾರಿತ್ರಿಕ ಘಟ್ಟಗಳನ್ನು ಯಾರು ನಿರ್ಲಕ್ಷಿಸುವಂತಿಲ್ಲ. ಇಂತಹ ಚರಿತ್ರೆಯಿರುವ ಭಾರತದ ಸಂದರ್ಭಕ್ಕೆ ಅದರ ಬಹುಮುಖಿ ಸ್ವರೂಪದ ಇರಿಹಾಸಕ್ಕೆ ಇಂದು ಜಾಗತಿಕ ನೆಲೆಯಲ್ಲಿ ಪ್ರಚಲಿತವಿರುವ ಸ್ತ್ರೀವಾದದ ಅಗತ್ಯವೆಲ್ಲಿ? ಅಥವಾ ಅದು ಅನಗತ್ಯವಾಗಿ ನಮ್ಮ ಮೈಮೇಲೆ ಎಳೆದುಕೊಂಡ ಅಗತ್ಯವೇ? ಅದೊಂದು ರಾಜಕೀಯ ಸಿದ್ಧಾಂತವಾಗಿ, ಹೋರಾಟದ ವಿಧಾನವಾಗಿ ಮತ್ತು ಸಾಹಿತ್ಯ ವಿಮರ್ಶೆಯ ಮೀಮಾಂಸೆಯಾಗಿ ಅರ್ಥಪೂರ್ಣವಾಗಬಲ್ಲುದೇ, ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ವರ್ತಮಾನದ ಪರಿಸರದಲ್ಲಿ ಸ್ತ್ರೀವಾದ ಚರ್ಚೆಗಳು ಮಹಿಳಾ ಅಧ್ಯಯನಗಳು ಮತ್ತು ಸ್ತ್ರೀವಾದಿ ವಿಮರ್ಶೆಯನ್ನು ಒಳಗೊಳ್ಳುವ ಪತ್ಯಗಳ ರಚನೆ ಹೆಚ್ಚಾಗಿ ಕಾಣಿಸಿಕೊಳ್ಳತೊಡಗಿದೆ, ಇಂಥ ಉತ್ಸಾಹದ ಯತ್ನಗಳಿಂದಾಗಿ ಸ್ತ್ರೀವಾದಿ ಚಿಂತನೆಯನ್ನು ಅದರ ಹೋರಾಟದ ನೆಲೆಗಳನ್ನು ಮತ್ತು ಅದರ ವಿಮರ್ಶಾತತ್ವವನ್ನು ಕುರಿತಂತೆ ಸಂಕೀರ್ಣವೂ ಗೊಂದಲಕರವೂ ಆದ ವಿಚಾರಗಳು ಅಭಿಪ್ರಾಯಗಳು ಪ್ರಚಲಿತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸಮಕಾಲೀನ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯಲ್ಲಿ ಇರುವ ರಾಜಕೀಯ ಮತ್ತು ಸೈದ್ಧಾಂತಿಕ ಸಮಸ್ಯೆಗಳ ನಿಜಸ್ವರೂಪವನ್ನು ಸ್ಪಷ್ಟವಾಗಿ ಪರಿಚಯಿಸಿಕೊಳ್ಳಬೇಕಾದದ್ದು ಅವಶ್ಯಕ.

ಡಾ. ಮಲ್ಲಿಕಾ ಘಂಟಿ ಅವರು ಪುರುಷ ಪ್ರಧಾನ ವ್ಯವಸ್ಥೆಯನ್ನು ಟೀಕಿಸುತ್ತಲೇ ಮೂದಲಿಕೆಯನ್ನು ಎದುರಿಸಿ ಕಾವ್ಯ ಕ್ಷೇತ್ರದಲ್ಲಿ ಮತ್ತು ವಿಮರ್ಶಾ ಕ್ಷೇತ್ರದಲ್ಲಿ ಸ್ತ್ರೀ ಪುರುಷರ ಪ್ರೀತಿ, ಪ್ರಣಯ ತವಕ ತಲ್ಲಣಗಳು, ಈ ಸಮಾಜದ ರಾಜಕೀಯ ಹುನ್ನಾರುಗಳು ದುಷ್ಟ ಆಚರಣೆಗಳು ಈ ಎಲ್ಲದರ ಬಗ್ಗೆಯೂ ತಮ್ಮ ಲೇಖನದಲ್ಲಿ ಝಳಪಿಸಿದ್ದಾರೆ.

ಹೆಣ್ಣು ಭಾಷೆ: ಈ ದೇಶದಲ್ಲಿ ಹಲವಾರು ಭಾಷೆಗಳು ಚಲಾವಣೆಯಲ್ಲಿವೆ ಅದರ "ಹೆಣ್ಣು ಭಾಷೆ" ಎಂದು ಗುರ್ತಿಸಿದ ಭಾವಕ್ಕೆ ನೂರಾರು ಅರ್ಥಗಳುಂಟು ಆ ಭಾಷೆ ಕಲ್ಲು ದೇವರುಗಳು ಆಡುವ ಬಾಷೆಯಾಗಿವೆ. ಇದು ಕೋಮಲವಾದದ್ದು ಹದಿಬದೆಯನ್ನು ಸಾರುವಂಥದ್ದು ಇಂಥ ಭಾಷೆಯಲ್ಲಿಯೇ ಹೆಣ್ಣುಗಳು ಸಂವಾದ ಮಾಡುತ್ತಾರೆ ಎನ್ನುವ ಭಾವನೆ.

“ಹೆಣ್ಣ ಭಾಷೆ ಹಡಿಗೆರೆಗಳ
ಅಳುಕಿಸುತ್ತವೆ ಕಣ್ಣಲ್ಲಿ ಉಸಿರ
ದುಂಬಿ ದಾಟಿಸುತ್ತವೆ. ಜೀವ
ಸಂಕುಲವ ಹೆತ್ತನೋವ ನೆನಪಿಸಿ
ಕೊಲ್ಲುಗೆಲ್ಲು ಕಾಯುವ
ಕಟ್ಟುವ ಇರಾದೆಯಿಲ್ಲದ
ಎದೆಯ ಭಾಷೆಗೆ ಬಾವವೋಮದ
ಹೆಣ್ಣನೋವು ಒಂದೇ”.

(ಮಲ್ಲಿಕಾ ಘಂಟಿ)

ಹೆಣ್ಣಿನ ಭಾಷೆ ಮೌನ ಭಾಷೆ. ಈ ಭಾಷೆಗೆ ಹೇರುವ , ಹೊರುವ ನೋವು ಗೊತ್ತಿದೆ, ಈ ಹೆಣ್ಣಿನ ಭಾಷೆ ಕೊಲ್ಲು-ಗೆಲ್ಲು ಎನ್ನುವ ರಾಕ್ಷಸತೆ, ತಿಳಿಯುವುದಿಲ್ಲ ಯಾವುದೇ ಇರಾದೆಗಳಿಗೆ ಒಳಗಾಗದ,ರೂಕ್ಷತೆ ತಿಳಿಯುವುದಿಲ್ಲ ಯಾವುದೇ ಇರಾದೆಗಳಿಗೆ ಒಳಗಾಗದ ಮಾತೆಯರು ಮಾತಗಿನ ಮಹತ್ವ ಅರಿತವರಾಗಿದ್ದಾರೆ.

ಷರಿಫಾರು ಸಮಕಾಲೀನ ಮುಸ್ಲಿಂ ಲೇಖಕಿಯರಲ್ಲಿ ಒಬ್ಬರು ಈ ಪುರುಷ ಪ್ರಧಾನ ಸಮಾಜದಲ್ಲಿ ಪರತಂತ್ರದ ಬೀಗುದಿಯಲ್ಲಿ ಅಶಿಕ್ಷಿತ ವಾತಾವರಣದಲ್ಲಿ ಹೆಣ್ಣು ಬಹುಕಾಲ ನರಳಿದ್ದಾಳೆ. ಶಿಕ್ಷಣ ಪಡೆದಿರುವವರೇ ಅಪರೂಪವಾಗಿದ್ದ ಸಮಾಜದಲ್ಲಿ ಶಿಕ್ಷಣ ಪಡೆದು ಮಹಿಳೆಯರು ಇನ್ನೂ ಅಪರೂಪವಾಗಿದ್ದು ಇಂತಹ ಹತಾಶ ಸ್ಥಿತಿಯಲ್ಲಿ ಒಬ್ಬ ಮಹಿಳೆ ಬರೆಯುತ್ತಾಳೆಂದರೆ ಹೇಗೆ ಬರೆಯುವುದು? ಏನನ್ನು ಬರೆಯುವುದು? ತಾನು ಬರೆದದ್ದೆಲ್ಲ ಸಾಹಿತ್ಯವಾಗುತ್ತದೆಯೇ? ಎನ್ನುವ ಹತಾಶ ಸ್ಥಿತಿಯಲ್ಲಿ ಮಹಿಳೆ ಕಾವ್ಯ ಕೃಷಿ ಪ್ರಾರಂಬಿಸಿದಳು ಅಂಥ ಮಹಿಳೆಯರಲ್ಲಿ ಷರೀಫಾರು ಸಹ ಒಬ್ಬರಾಗಿದ್ದಾರೆ.

'ಭರಣ'ಕ್ಕೆ ಮುನ್ನುಡಿ ಬರೆದ ಕಮಲಾ ಹಂಪನಾ ಹೀಗೆನ್ನುತ್ತಾರೆ 'ಭರಣ' ಎಂದರೆ ಧರಿಸುವುದು ಪೋಷಿಸುವುದು ತುಂಬುವುದು ಈ ಮೂರು ಗುಣಗಳ ಪ್ರತೀಕವೇ ಮಹಿಳೆ ಧರಿಸುವುದರಿಂದಲೇ ಈಕೆ ಧಾರಿಣಿ, ಶಾಂತಿ, ಸಹನೆ, ಧಾರಣೆಯ ಪ್ರತಿ ರೂಪವೇ ಸ್ತ್ರೀ ಹೀಗೆ ಮಹಿಳೆ ಭರಣವೂ ಹೌದು. ಆಭರಣವೂ ಹೌದು ಭೂಮಿಯೂ ಹೌದು ಎಲ್ಲ ಮಹಿಳೆಯರೂ ಒಂದಲ್ಲ ಒಂದು ರೀತಿಯಲ್ಲಿ ಜಗತ್ತಿನ ಮುನ್ನಡೆಗೆ, ವಿಶ್ವದ ಚಲನೆಗೆ ಪಾತ್ರರಾಗಿದ್ದಾರೆ.

ಕಮಲಾ ಹಂಪನಾರ ಬಾಷೆ ಎಷ್ಟು ಸುಲಲಿತವಾದದ್ದು ಎಂದು ಇಲ್ಲಿ ಅರ್ಥವಾಗುತ್ತದೆ. ಅವರು ಬಿಂದುಲಿ ಎನ್ನುವ ಸಂಕಲನದ ಒಂದು ರಚನೆ ಗಮನಿಸೋಣ.

"ನಾನು ಅಮೃತ ಮತಿಯಲ್ಲಾ,
ನನಗೆ ಬೇಕಿಲ್ಲ ಅಷ್ಟಾವಂಕ
ತಿನ್ನಿಸಲಾರೆ ವಿಷದ ಲಡ್ಡುಗೆ
ನಾನು ಸುನಂದೆಯಲ್ಲ
ಗಂಡನ ಅಳಿವಿನಲ್ಲಿ ನನ್ನ ಸಾವ ಕಾಣಲು
ನಾನು ಸೀತೆಯೂ ಅಲ್ಲ
ಅವನೊಡ್ಡಿದ ಅಗ್ನಿ ಕುಂಡ ಹಾಯಲು
ನಾನು ಊರ್ಮಿಳೆಯೂ ಅಗಲಾರೆ
ನಾನು ನಾನಾಗಿಯೆ ಉಳಿವ ಕಮಲಾಪ್ರಿಯ ಎನ್ನುತ್ತಾರೆ

(ಕಮಲಾ ಹಂಪನ)

ಇದು ಕಮಲಾ ಹಂಪನರ ಅಭಿಪ್ರಾಯ ಇಲ್ಲಿ ಯಾರ ಅಂಗಿಗೂ ಒಳಗಾಗದೇ ಒಬ್ಬ ಮಹಿಳೆ ಮಹಿಳೆಯಾಗಿ ಆಗಿಯೇ ಇರಬೇಕು ಎನ್ನುವ ಭಾವನೆ.

ಸಾರಾ ಅಬೂಬಕರ್

ತಾವೂ ಕನಸು ಕಂಡ ಒಂದು ಬದುಕನ್ನು ತಮ್ಮದಾಗಿಸಿಕೊಳ್ಳಲು ಮಹಿಳೆಯರು ಎಷ್ಟು ಹೆಣಗಾಡಬೇಕಾಗುತ್ತದೆ ಎಷ್ಟೋಂದು ತ್ಯಾಗ ಮಾಡಬೇಕಾಗುತ್ತದೆ ಅಥವಾ ಹಲವು ವಿಧದಲ್ಲಿ ಹೆಣಗಾಡಿದರೂ ತಮ್ಮ ಕನಸಿನ ಬದುಕು ಕೈಗೆಟಕದಿರುವಾಗ ಮಹಿಳೆಯರ ಬದುಕು ಯಾವ ಹಾದಿ ಹಿಡಿಯಬಹುದು ಮುಂತಾದ ಹಲವಾರು ವಿಷಯಗಳ ಕುರಿತು ಮಹಿಳೆಯರು ಪ್ರಾಮಾಣಿಕವಾಗಿ ಬರೆದರೆ ಅದು ಮಹಿಳಾ ಲೋಕಕ್ಕೆ ಒಂದು ಉತ್ತಮ ಆಸ್ತಿಯಾಗಬಯಸುವ ಪ್ಲೇಮಿಯಾ ಎಂಬ ಕ್ರೈಸ್ತ ಮಹಿಳೆ ಗಂಡನ ದೌರ್ಜನ್ಯ ಮತ್ತು ಹಿಂಸೆ ತಾಳಲಾರದೆ ಆ ಬದುಕಿನಿಂದ ಹೊರಬಂದು ತನ್ನ ಶಿಕ್ಷಣ ಮುಂದುವರಿಸಿ ನ್ಯಾಯವಾದಿಯಾಗಿ ತನ್ನಂತೆ ನೊಂದ ಮಹಿಳೆಯರಿಗೆ ಸಹಕರಿಸುವಂತಹ ಹೊಸ ಬದುಕನ್ನೇ ರೂಢಿಸಿಕೊಂಡದ್ದು ಸಾಮಾನ್ಯ ಮಹಿಳೆಯರಿಗೆ ಸಹಕರಿಸುವಂತಹ ಹೊಸ ಬದುಕನ್ನೇ ರೂಡಿಸಿಕೊಂಡಿದ್ದು ಸಾಮಾನ್ಯ ಮಹಿಳೆಯರಿಂದಾಗುವ ಕಾರ್ಯವಲ್ಲ ಮಹಿಳೆಯರಲ್ಲಿ ಅಂತಹ ಛಲವೂ ಬೇಕು.

ಪುರುಷ ಪ್ರಧಾನ ವ್ಯವಸ್ಥೆ, ಆರ್ಥಿಕ ಅವಲಂಬನೆ, ಮಕ್ಕಳಿಗಾಗಿ ಮಿಡಿಯುವ ಹೃದಯ, ಗೌರವಪೂರ್ಣ ಬದುಕಿನ ಲಾಲಸೆ, ಹೊರ ಪ್ರಪಂಚದ ಕುರಿತಾದ ಅಜ್ಞಾನ, ದಿಗಿಲು, ಅಲ್ಲದೆ ಹೊರ ಜಗತ್ತಿನ ಕ್ರೌರ್ಯ, ಹೀಗೆ ಕಾರಣಗಳಿಂದ ಹೆಣ್ಣು ಕುಟುಂಬದ ಒಂದು ಆತ್ಮೀಯ ವಲಯದಲ್ಲಿರಲು ಹಪಹಪಿಸುತ್ತಾಲೆಯೇ ವಿನಾ ಹೊರ ಜಗತ್ತಿನ ಚಳಿ ಮಳೆಗೆ ತನ್ನನ್ನು ಒಡ್ಡಿಕೊಳ್ಳಲು ಹಿಂಜರಿಯುತ್ತಾಳೆ.

ಮನೆಯೊಳಗಿನ ವ್ಯವಸ್ಥೆ ಎಷ್ಟು ಸುರಕ್ಷಿತವಾಗಿರುತ್ತದೆ. ಅನ್ನುವುದು ಪ್ರತ್ಯೇಕ ವಿಷಯ. ಹುಳುಕುಗಳು ಬೇಕಾದಷ್ಟಿರಬಹುದು, ದಡ್ಡ ಗಂಡನನ್ನು ಒಳ್ಳೆಯವನೆಂದು ಬಿಂಭಿಸುವ, ಸೋಮಾರಿ ಮಕ್ಕಳನ್ನು ವಹಿಸಿಕೊಂಡು ಮಾತಾಡುವ, ದರ್ಪಿಷ್ಟ ಅತ್ತೆಯನ್ನೋ, ಸೊಸೆಯನ್ನೋ ಸಹಿಸಿಕೊಳ್ಳುವ, ಗಂಡನ ಲಂಚ ರೋಷಾ, ಕುಡಿತ, ಮೋಜುಗಳನ್ನು ನುಂಗಿಕೊಳ್ಳುವ, ಹೀಗೆ ಹೇಳುತ್ತಾ ಹೋದರೆ ಅಸಂಖ್ಯ ಉದಾಹರಣೆಗಳು ಸಿಕ್ಕುತ್ತಾವೆ. ಎಲ್ಲರ ಮನೆಯ ದೋಸೆ ತೂತು. ಆದರೆ ನಮ್ಮ ಮನೆಯ ದೋಸೆ ಉತ್ಕೃಷ್ಟ ಎಂದು ಪ್ರಪಂಚದೆದುರು ತೋರಿಸಿಕೊಳ್ಳಬೇಕೆಂದು ಹೆಂಗಸರ ಹಟ. ಇಂತಾ ಹೆಣ್ಣು ಆತ್ಮಕಥೆ ಬರೆದಾಳೆಯೇ? ಸಾರ್ವಜನಿಕವಾಗಿ ನಗ್ನವಾಗಿ ನಿಲ್ಲುವ ಧೈರ್ಯ ಮಾಡಿಯಾಳೆ? ಹೇಳಬಹುದಾದ್ದನ್ನು ಅನಗತ್ಯವಾಗಿ ಬಿಂಬಿಸಿ, ಹೇಳಬಾರದ್ದನ್ನು ತೇಲಿಸಿ ಹೇಳಿ, ಆತ್ಮವಂಚನೆಯಾಗಲಿಲ್ಲ ಎಂದು ಬೀಗಿದರೆ ಅದು ಆತ್ಮಕತೆಗೆ ನ್ಯಾಯ ಸಲ್ಲಿಸಿದಂತಾಗುತ್ತದೆಯೇ? ಇದ್ದುದನ್ನು ಇದ್ದಂತೆ ಹೇಳಿದರೆ ಕೌಟುಂಬಿಕ ಸಂಬಂಧ ಹದಗೆಟ್ಟು ಮುಂದಿನ ಭವಿಷ್ಯದಲ್ಲಿ ಮನಶ್ಶಾಂತಿ ಎನ್ನುವುದು ಗಗನಕುಸುಮವಾಗಬಹುದು. ಲೈಂಗಿಕ ವಿಷಯಕ್ಕೆ ಸಂಬಂಧಪಟ್ಟ ಅವಘಡಗಳು ನಡೆದಿದ್ದರೆ ಸಂಸಾರ ನುಚ್ಚುನೂರಾಗಬಹುದು. ಹೆತ್ತ ಮಕ್ಕಳೇ ಕಡೆಗಣಿಸಬಹುದು. ಜನ ಬೆರಳು ತೋರಿಸಿ ನಗಬಹುದು. ಏನೇನೊ ಆಗಬಹುದು. ಈ ಸಂಬಂಧಗಳ ಭೀತಿ ಸೂಕ್ಷ್ಮ ಸ್ವಭಾವದ, ಭಾವನಾ ಪ್ರಧಾನ ವ್ಯಕ್ತಿತ್ವ ಹೆಣ್ಣಿನ ಲೇಖಲಿಯ ಮೇಲೆ ಸಾಧಿಸಿರುವ ಹಿಡಿತ ವಜ್ರಮುಷ್ಟಿಯ ಬಿಗಿತ. ಇದು ನನ್ನ ಅನಿಸಿಕೆ.

ನನ್ನದೇ ಬದುಕಿನ ಅನುಭವಗಳನ್ನು ನೇರವಾಗಿ ಬರೆಯುವುದಕ್ಕೆ ಕಾರಣವೂ ಇತ್ತು. ಬರೆಯುವ ಸಂದರ್ಭದಲ್ಲಿ ಅದು ಅಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದೆ ಎಂದೂ ಅನ್ನಿಸುತ್ತದೆ. ಆ ಕಾರಣವೆಂದರೆ, ಮಹಿಳಾ ಚಳುವಳಿಯೊಂದಿಗಿನ ನನ್ನ ಅನುಭವಗಳು, ಅತ್ಯಾಚಾರ, ವಿಚ್ಛೇದನೆ, ಲೈಂಗಿಕ ಹಿಂಸೆ, ಕೌಟುಂಬಿಕ ಹಿಂಸೆಯ ಪ್ರಕರಣಗಳ ಸಂದರ್ಭಗಳಲ್ಲಿ ಅನೇಕ ಮಹಿಳೆಯರು ಸಂಘಟನೆಗೆ ಬರುತ್ತಿದ್ದರು. ಆ ಸಮಸ್ಯೆಗಳಿಗೆ ಸಹಾಯ, ಪರಿಹಾರ ಕುರಿತಂತೆ ಕೆಲಸ ಮಾಡುತ್ತಿದ್ದ ನಮ್ಮೆದುರು ಆ ಮಹಿಳೆಯರು ಅವರ ಬದುಕನ್ನು ಬಿಚ್ಚಿಡುತ್ತಿದ್ದರು. ಅದು ಅನಿವಾರ್ಯವೂ ಆಗಿರುತ್ತಿತ್ತು. ಅವು ಕೋರ್ಟು, ಪೊಲೀಸ್ ಠಾಣೆಗಳಲ್ಲಿ, ಮಾಧ್ಯಮಗಳಲ್ಲಿ ಬಹಿರಂಗವೂ ಸಾರ್ವಜನಿಕವಾಗಿ ಇಡಬಲ್ಲೆನೆ? ಎಂಬುದು ಮಧ್ಯಮ ವರ್ಗದ ಮಹಿಳೆಯರು ನೂರೊಂದು ಮುಖವಾಡಗಳನ್ನು ಧರಿಸಿ ಬದುಕುತ್ತಾರೆ. ನಾವು ಅನುಭವಿಸುವ ನೋವು, ಅಪಮಾನಗಳನ್ನು ಸಾರ್ವಜನಿಕ ಸಭೆಯಲ್ಲೂ ಮುಂದಿಡುವುದಿಲ್ಲ. ಬೇರೆಯವರಿಗೆ ಸೂಚಿಸುವಂತೆ ಮನೆಯೊಳಗೆ ನಡೆಯುವ ಹಿಂಸೆಗೆ ಸುಲಭವಾಗಿ ಪೊಲೀಸ್ ಠಾಣೆಗೂ ಹೋಗುವುದಿಲ್ಲ. ಈ ವೈರುಧ್ಯ ನನ್ನನ್ನು ಬಹಳ ಕಾಡಿದೆ. ಈ ವೈರುಧ್ಯವನ್ನು ಪುಸ್ತಕ ಮೀರಿಕೊಳ್ಳಲು ಸಹಾಯ ಮಾಡಿದೆ. ಹೋರಾಟಗಾರ್ತಿ ಸರಸ್ವತಿ ಜೊತೆಯಾಗಿಯೇ ಇದ್ದ, ಕೈಚೆಲ್ಲಿ ಅಸಹಾಯಕಳಾಗಿ ಕೂರುವ ಸರಸ್ವತಿಯು'ಈಗೇನು ಮಾಡ್ತೀರಿ?' ಮೂಲಕ ಎಲ್ಲರಿಗೂ ಪರಿಚಯವಾದಳು. ಮುಖವಾಡಗಳನ್ನು ಕೊತ್ತೊಗೆಯುವುದು ನಮ್ಮನ್ನು ಹೆಚ್ಚು ಪ್ರಮಾಣಿಕರನ್ನಾಗಿಸುವುದಷ್ಟೇ ಅಲ್ಲ ನಿರ್ಭೀತರನ್ನಾಗಿಯೂ ಮಾಡುತ್ತದೆ.

ತಮ್ಮದೇ ರೀತಿಯಲ್ಲಿ ಚೌಕಟ್ಟುಗಳನ್ನು ಮುರಿದು ಆತ್ಮಘನತೆಯಿಂದ ಬದುಕುತ್ತಿರುವ, ಬರವಣಿಗೆಯ ಸಾಧ್ಯತೆ ಇರುವ, ಅಕ್ಷರವೇ ತಿಳಿಯದ ಅನೇಕ ಮಹಿಳೆಯರು ನಮ್ಮೊಳಗೆ ನಮ್ಮೊಡನೆ ಇದ್ದಾರೆ. ಅಂತಹವರ ಬದುಕನ್ನು ದಾಕಲಿಸುವ ಪ್ರಯತ್ನವನ್ನು ನಾವು ಮಾಡಬೇಕು. ಈ ಪ್ರಕ್ರಿಯೆಯಲ್ಲಿ ಲೇಖಕಿಯರು ಒಂದು ಸಮುದಾಯವಾಗಿ ಒಬ್ಬರಿಗೊಬ್ಬರು ಜೊತೆಯಾಗಿ ನಿಲ್ಲುವುದು ಅಗತ್ಯವೆಂದು ನಾನು ಭಾವಿಸುತ್ತೇನೆ.

ಮಹಿಳಾ ಚಳುವಳಿಯೆಂದರೆ ಅದರಲ್ಲಿ ಮಹಿಳೆ ಮಾತ್ರ ಇರಬೇಕೇ? ಇಲ್ಲವೆ 'ಮಹಿಳೆಯರ ಕಾಳಜಿ'ಗಳಿಗಾಗಿ ನಡೆಯುವ ಹೋರಾಟ ಮಾತ್ರ ಆಗಿರಬೇಕೆ? – ಈ ಪ್ರಶ್ನೆಗಳನ್ನು ಮತ್ತೆ ಮತ್ತೆ ಎತ್ತಲಾಗುತ್ತದೆ. ಪುರುಷರು ತಮ್ಮ ಅಗತ್ಯಗಳಿಗಾಗಿ ನಡೆಸುವ ಹೋರಾಟಗಳಿಗೂ ಮಹಿಳೆಯರನ್ನು ಬಲವಂತವಾಗಿ ಸಾಧನವಾಗಿ ಬಳಸಿಕೊಳ್ಳುತ್ತಾರೆ, ಎಂಬುದು ಒಂದು ಆಪಾದನೆಯಾದರೆ, ರೇಷನ್‌ಗಾಗಿ, ಸೀಮೆಎಣ್ಣೆಗಾಗಿ ಹೋರಾಟ ಮಾಡುವಂತೆ ಮಹಿಳೆಯರನ್ನು ಮಾತ್ರವೇ ಸಂಘಟಿಸುವುದೇಕೆ? ಅದು ಸ್ತ್ರೀ ಪುರುಷರಿಬ್ಬರ ಜವಾಬ್ದಾರಿಯಲ್ಲವೇ? ಎನ್ನುವ ಸ್ತ್ರೀವಾದಿಗಳು ನಮ್ಮ ನಡುವೆ ಉಂಟು.

ನಾವು ಮೊದಲಿಗೆ ಪ್ರಸ್ತಾಪಿಸಿದಂತೆ, ಭಾರತದ ಮಹಿಳಾ ಚಳುವಳಿಯ ಬೀಜಾಂಕುರವಾದದ್ದೇ ಸ್ವಾತಂತ್ರ್ಯ ಚಳುವಳಿಯಲ್ಲಿ. ಸ್ವಾತಂತ್ರ್ಯ ಚಳುವಳಿ ಮಹಿಳೆಯರನ್ನು ಬಳಸಿಕೊಂಡದ್ದರಿಂದ ಚಳುವಳಿಗೆ ಲಾಭವಾದಷ್ಟೇ ಮಹಿಳೆಯರಿಗೂ ಆಗಿದೆ. ಆರಂಭದ ಎಡ ಗ್ರಾಮೀಣ ಚಳುವಳಿಯಲ್ಲಿ . ಸ್ವಾತಂತ್ರ್ಯ ಚಳುವಳಿ

ಮಹಿಳೆಯರನ್ನು ಬಳಸಿ ಕೊಂಡದ್ದರಿಂದ ಚಳುವಳಿಗೆ ಲಾಭವಾದಷ್ಟೇ ಮಹಿಳೆಯರಿಗೂ ಆಗಿದೆ ಆರಂಭದ ಎಡ ಗ್ರಾಮೀಣ ಚಳುವಳಿಗಳಾದ ತೆಲಂಗಾಣ, ವರ್ಲಿ ಚಳುವಳಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯಿಂದ ಹೋರಾಟದ ಯಶಸ್ಸಿಗೆ ಸಾಕಷ್ಟು ಸಹಾಯವಾಗಿದೆ. ಹಾಗೆಯೇ ಈ ಮಹಿಳೆಯರ ಭಾಗವಹಿಸುವಿಕೆಯಿಂದ ಹೋರಾಟ ಯಶಸ್ಸಿಗೆ ಸಾಕಷ್ಟು ಸಹಾಯವಾಗಿದೆ. ಹಾಗೆಯೇ ಈ ಮಹಿಳೆಯರ ಪ್ರಜ್ಞೆಯ ವಿಸ್ತಾರಕ್ಕೂ ಈ ಚಳುವಳಿಗಳಲ್ಲಿ ಭಾಗವಹಿಸುವಿಕೆ ನೆರವಾಗಿದೆ. ಇಂತಹ ಸಂದರ್ಭದಲ್ಲಿ ಈ ಗ್ರಾಮೀಣ ಚಳುವಳಿಗಳು ಮಹಿಳೆಯರನ್ನು ಬಳಸಿಕೊಂಡು ನಂತರ ಅವರನ್ನು ಗೃಹಕೃತ್ಯಕ್ಕೆ ಚಾಕರಿಯೊಳಗೆ ತಳ್ಳಿಬಿಟ್ಟಿತು, ಎಂದು ಹೇಳುವುದು ಸುಲಭ, ಆದರೆ ಮುಖ್ಯವಾಗಿ ಇವು ಯಾವುವೂ ಮಹಿಳಾ ಚಳುವಳಿಯ ನಿರ್ವಚನವನ್ನು ಸಮಗ್ರವಾಗಿ ಕೊಡಲು ಸಾಧ್ಯವಿಲ್ಲ.

ನಾಲ್ಕು ಗೋಡೆಗಳೊಳಗೆ, ಸಂಪ್ರದಾಯದ ಕೋಟೆಯಲ್ಲಿರುವ ಭಾರತೀಯ ಮಹಿಳೆ ತನ್ನ ದಾಸ್ಯವನ್ನು ಕೊಡವಿ ಹೊರಬರಲು ನಡೆಸುವ ಎಲ್ಲಾ ಹೋರಾಟಗಳೂ ಮಹಿಳಾ ಹೋರಾಟವೇ. ಈ ಹೋರಾಟದಲ್ಲಿ ಕುಟುಂಬದ ಒಳಗಿರುವ ಗಂಡ–ಸಂಪ್ರದಾಯ–ಇವೆರಡೂ ಹೋರಾಡಬೇಕಾದರೆ. ಈ ವ್ಯಾಪಕ ಹೋರಾಟದಲ್ಲಿ ಮಹಿಳೆಯರ ಜೊತೆಗಿರುವವರು ಯಾರು? ಮಹಿಳೆಯರ ವೈರಿ ಯಾರು? ಮಹಿಳೆಯರು ಅನುಸರಿಸಬೇಕಾದ ಹೋರಾಟದ ತಂತ್ರಗಳೇನು? ಸಿದ್ಧಾಂತವೇನು ಎಂಬುದು ಮಹಿಳಾ ಹೋರಾಟದ ಸ್ವರೂಪವನ್ನು ನಿರ್ಣಯಿಸುತ್ತದೆ.

‘ಅಧಿಕಾರ’ ಶಕ್ತಿರಾಜಕೀಯಕ್ಕೆ ‘ಸ್ವಾಯತ್ತತೆ’ಯ ಹೋರಾಟದ ಪರಿಚಯ ಪರಿಕಲ್ಪನೆ ಎಂದಿಗೂ ಪರ್ಯಾಯವಾಗಲಾರದು ಎಂಬುದರ ಬಗ್ಗೆ ಹೆಚ್ಚು ಮಹಿಳೆಯರ ಗಮನ ಸೆಳೆಯುವ, ಸಂಘಟಿಸುವ ಕಾರ್ಯ ಇಂದು ಆಗಬೇಕಿದೆ. ಆದ್ದರಿಂದಲೇ ಮಹಿಳೆಯರು ಹೆಚ್ಚು ಹೆಚ್ಚು ರಾಜಕೀಯ ಪ್ರಕ್ರಿಯೆಗೆ ಒಳಗೊಳ್ಳಬೇಕು ಮತ್ತು ಮಹಿಳಾ ಪ್ರಶ್ನೆ ರಾಜಕೀಯ ಪ್ರಶ್ನೇಯಾಗಬೇಕು. ಇಲ್ಲಿ ‘ರಾಜಕೀಯ’ ಎಂದರೆ ಕೇವಲ ಚುನಾವಣೆಯ ರಾಜಕೀಯವಲ್ಲ ಸ್ವಲ್ಪ ವರ್ಷಗಳ ಕಾಲವಾದರೂ ಚುನಾವಣೆಗೆ ಗಮನ ಕೊಡುವುದಕ್ಕಿಂತ ಜನರ ನಡುವೆ ಕೆಲಸ ಮಾಡಿ ಚಳುವಳಿಯನ್ನು ಕಟ್ಟಬೇಕು. ವಸಾಹತುಶಾಹಿ ಸರ್ಕಾರದ ವಿರುದ್ಧ ಹೋರಾಡಿರುವ ಧೀರ ಮಹಿಳೆಯರು ಕಲಿಸಿದ ಪಾಠ ಇಂದಿನ ನವವಸಾಹತುಶಾಹಿಯ ವಿರುದ್ಧ ಹೋರಾಟಕ್ಕೂ ಅಗತ್ಯವಾಗಿ ಬೇಕಾಗಿದೆ. ಮತ್ತೊಂದು ತೇಭಾಗವೋ, ತೆಲಂಗಾಣವೋ ನಡೆಯದಿದ್ದಲ್ಲಿ ಬ್ರಿಟೀಷರಿಗಿಂತ ಚೆನ್ನಾಗಿ ನಮ್ಮನ್ನು ಸಾಮ್ರಜ್ಯಶಾಹಿಗಳು ಅವರವರ ದೇಶಗಳಲ್ಲಿ ಕುಳಿತೇ ದೋಚಿ , ದಿವಾಳಿ ಎಬ್ಬಿಸುತ್ತಾರೆ ನಮ್ಮ ಹೋರಾಟದ ಗುರಿ ಮತ್ತು ಸ್ವರೂಪವನ್ನು ಇಂದು ನಿರ್ಧರಿಸುವುದು ಮತ್ತು ನಿರ್ಧರಿಸಬೇಕಾದದ್ದು ಈ ನವವಸಾಹತುಶಾಹಿಯ ವಿರುದ್ಧದ ಹೋರಾಟದಲ್ಲಿ ತೊಡಗಿರುವ ಮಹಿಳಾ ಮಹಿಳಾ ಚಳುವಳಿಯೇ.

ಮಹಿಳಾ ದಶಕದ ನಂತರದಲ್ಲಿ ದೇಶದಲ್ಲಿ ಹೆಚ್ಚಿನ ಸ್ವಯಂಸೇವಾ ಸಂಘಟನೆಗಳು ಮಹಿಳೆಯರನ್ನು ಒಟ್ಟುಗೂಡಿಸಿ, ವಿಶೇಷವಾಗಿ ದುಡಿಯುವ ಮಹಿಳೆಯರ ಸಂಘಟನೆಯನ್ನು ನಡೆಸುತ್ತಾ ಬಂದಿವೆ. ಕೊಳೆಗೇರಿಯ ಮಹಿಳೆಯರು, ಮನೆಗೆಲಸದ ಮಹಿಳೆಯರು, ಕಟ್ಟಡ ನಿರ್ಮಾಣದ ಮಹಿಳೆಯರು. ಮುಂತಾದವರನ್ನು ಸಂಗಟಿತ ವ್ಯಾಪ್ತಿಯೊಳಗೆ ತರುವ ಪ್ರಯತ್ನಗಳು ನಡೆಯುತ್ತಿವೆ.

ಇದುವರೆಗೂ ಗೃಹಕೃತ್ಯದ ದಾಸ್ಯದಲ್ಲಿ ಬಳಲಿದವರಿಗೆ ಸಮಾಜದ ದ್ವಿಮುಖ ನೀತಿಯಿಂದ ಮರ್ದನಕ್ಕೊಳಗಾದವರಿಗೆ ಈ ಸಂಘಗಳು ಒಂದು ರೀತಿಯ ಹೊಸ ಬದಲಾವಣೆಯಾಗಿ ಆಕರ್ಷಕವಾಗಿ ಕಂಡವು ಮಹಿಳೆಯರಿಗೆ ಭಿಕ್ಷುಣಿಯರಾಗಲು ದೊರಕದ ಸ್ವಾತಂತ್ರ್ಯ ಗೃಹಿಣಿ ಪಟ್ಟಕ್ಕೆ ದೊರತಿದೆ ಪರ್ಯಾಯ ವ್ಯವಸ್ಥೆಯಾಯಿತು. ಕೋಶಲ ರಾಜ್ಯದ ಬಡ ಬ್ರಾಹ್ಮಣನ ಮಗಳ ಮುತ್ತಾ ಎನ್ನುವವಳು ರಚಿಸಿದ ಥೇರಿಗಾಥಾದ ಸಾಲುಗಳು ಹೀಗಿವೆ.

ಓ ಎಂಥ ಬಿಡುಗಡೆ! ಅಮೋಘವಾದ ಬಿಡುಗಡೆ

ಮುಕ್ತಾಳಾಗಿರುವೆ ಈಗ ಮೂರು ಹಾಳು ಜಂಜಾಟಗಳಿಂದ

ಬೀಸುವ ಕಲ್ಲಿನಿಂದ, ಕುಟ್ಟುವ ಒನಕೆಯಿಂದ ಗೂನುಬೆನ್ನಿನ ನನ್ನ ಈ ಗಂಡನಿಂದ

ಸುಮಂಗಲ ಮಾತಾ ಎನ್ನುವ ಮತ್ತೊಬ್ಬ ಥೇರೀಯು ಹಾಸಿದ್ದು ಹೀಗೆ

ಓ ಬಿಡುಗಡೆ ಪಡೆದ ಹೆಣ್ಣೇ! ನಾನೆಷ್ಟು ಸ್ವಾತಂತ್ರ್ಯಳು ಈಗ,

ಅಡಿಗೆ ಮನೆಯ ಕೊಳಕು ಚಾಕರಿಯಿಂದ

ಮಣಿ ಹಿಡಿದ, ಕೊಳಕಾದ ನನ್ನ ಅಡಿಗೆಯ ಮಡಕೆಗಳಿಂದ

ರಾಕ್ಷಸ ಗಂಡನಿಂದ ಸಂಪೂರ್ಣ ವಿಮುಕ್ತೆ ನಾನು

ಈ ಎಲ್ಲಾ ಅಂಶಗಳಿಂದ ಬುದ್ದನ ಸಂಘವು ಸಮಾಜದ ಎಲ್ಲಾ ರೀತಿಯ ಮಹಿಳೆಯರನ್ನು ಅವರ ವೃತಿ, ಅಂತಸ್ತುಗಳನ್ನು ಏನೇ ಇರಲಿ ಸಮಾನವಾಗಿ ಸ್ವೀಕರಿಸಿತು ಎಂದು ತಿಳಿಯುತ್ತದೆ ಬೇರೆ ಯಾವ ಧರ್ಮವೂ ಸ್ವೀಕರಿಸಲಾಗದ ಪತಿತೆಯರೂ ಮೈ ಮಾರಿ ಕೊಳ್ಳುವಂತಹವರೂ ಕೂಡ ಬುದ್ಧನ ಸಂಘಗಳಲ್ಲಿ ಘನತೆ.

ಗೌರವವನ್ನು ಪಡೆದರು ಎಂಬುದು ಬಹುಮುಖ್ಯವಾದ ಸಂಗತಿ. ಸರ್ಕಾರಿ ಉದ್ಯಮಗಳಲ್ಲಿ ಹೆಣ್ಣು-ಗಂಡಿನ ನಡುವೆ ಸಮಾನ ವಿದ್ಯಾರ್ಹತೆ ಗಳಿರುವುದರಿಂದ ಮತ್ತು ಕಾರ್ಮಿಕ ಕಾಯಿದೆಯನ್ನು ಬಿಗಿಯಾಗಿ ಪಾಲಿಸಬೇಕಾಗಿರುವುದರಿಂದ ಮತ್ತು ಕಾರ್ಮಿಕ ಕಾಯಿದೆಯನ್ನು ಬಿಗಿಯಾಗಿ ಪಾಲಿಸಬೇಕಾಗಿರುವುದರಿಮದ ಸಮಾನ ದುಡಿಮೆಗೆ ಸಮಾನ ವೇತನ ದೊರೆಯುತ್ತದೆ. ಆದರೆ ಇಂತಹ ದುಡಿಮೆಯಲ್ಲಿ ತೊಡಗಿರುವವರ ಸಂಖ್ಯೆ ಹೆಚ್ಚಿಲ್ಲ. ಸಮಾಜದಲ್ಲಿ ಎರಡನೆ ಪ್ರಜೆ ಎನಿಸಿಕೊಂಡ ತೊಡಗಿರುವವರ ಅಂಖ್ಯೆ ಹೆಚ್ಚಿಲ್ಲ. ಸಮಾಜದಲ್ಲಿ ಎರಡನೆಯ ಪ್ರಜೆ ಎನಿಸಿಕೊಂಡ ಹೆಣ್ಣಿನ ಶ್ರಮ ಅತ್ಯಂತ ಅಗ್ಗವಾದದ್ದರಿಂದ ಮಾಲಿಕರಿಗೆ ಇದರ ಮೇಲೆ ಹೆಣ್ಣನ್ನು ಲೈಂಗಿಕ ಅಸಮಾನತೆಯನ್ನು ವೇತನ ತಾರತಮ್ಯದಲ್ಲಿ ಅನುಭವಿಸುವ ದುಡಿಯುವ ಮಹಿಳೆಯರೇ ಹೆಚ್ಚು, ಬೀಡಿ, ಹೊಗೆಸೊಪ್ಪು, ಅಗರಬತ್ತಿ, ಅಕ್ಕಿಯ ಗಿರಣಿ, ಗೋಡಂಭಿ, ಸೆಣಬಿನ ನಾರು, ಮುಂತಾದ ಕೈಗಾರಿಕೆಗಳಲ್ಲಿ ದುಡಿಯುವ ಸ್ತ್ರೀಯರಿಗೆ ಮತ್ತು ಕೃಷಿ ಕಾರ್ಮಿಕ ಮಹಿಳೆಯರಿಗೆ ಹಾಗೂ ಮನೆಕಟ್ಟುವ ಕೆಲಸದಲ್ಲಿರುವ ಹೆಂಗಸರಿಗೆ ಸಮಾನ ದುಡಿಮೆಗೆ ಸಮಾನ ವೇತನ ಸಿಗುವುದಿಲ್ಲ.

ಭಾರತ ಸರ್ಕಾರವು 1975 ಸೆಪ್ಟೆಂಬರ್ 26 ರಂದು 'ಸಮಾನ ದುಡಿಮೆಗೆ ಸಮಾನ ವೇತನ' ಎಂಬ ಅರ್ಡಿನೆನ್ಸನ್ನು ತಂದಿತು. ಸಾಮಾಜಿಕವಾಗಿ ಉತ್ಪನ್ನಕಾರಕ ದುಡಿಮೆಯಲ್ಲಿ ಒಳಗೊಳ್ಳದೆ ಗೃಹಕೃತ್ಯದ ಜವಾಬ್ದಾರಿಯನ್ನು ಮಾತ್ರ ವಹಿಸುವ ಮಹಿಳೆಯರ ಮನೆಯೊಳಗೆ ಕೆಲಸಕ್ಕೆ ಎಂತಹ ಬೆಲೆ ಕಟ್ಟಬೇಕೆಂಬುದು ಚರ್ಚಿತವಾಗುತ್ತಲೇ ಬಂದ ವಿಷಯ, ನೈರೋಬಿಯ

ಸಮಾವೇಶದ ಸಂದರ್ಭದಿಂದಲೂ ಈ ಸಮಸ್ಯೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಅಯಾಮಗಳನ್ನೊಳಗೊಂಡು ಚರ್ಚೆಗೊಳಗಾಗುತ್ತಲೇ ಬಂದಿದೆ, ನೈರೋಬಿಯ ಸಮ್ಮೇಳನದಲ್ಲೂ "ಮಹಿಳೆ ಮನೆಯಲ್ಲಿ ಮಾಡುವ ಕೆಲಸಕ್ಕೆ ವೇತನ ಕೊಡಬೇಕು, ಗಂಡನಲ್ಲ ಸರ್ಕಾರ" ಎನ್ನುವ ಅಭಿಪ್ರಾಯ ಕೆಲವರದಾದರೆ, ಗಂಡನೇ ಹೆಂಡತಿಯ ದುಡಿಮೆಗೆ ಕೂಲಿ ಕೊಡಬೇಕು' ಎಂಬ ಅಭಿಪ್ರಾಯವುಳ್ಳವರೂ ಕೆಲವರು ಮಹಿಳೆಯರ ಗೃಹಕೃತ್ಯದ ಶ್ರಮವನ್ನು ಬೆಲೆಯುಳ್ಳ ದುಡಿಮೆಯನ್ನಾಗಿಸಬೇಕೆಂಬ ಈ ವಾದ ಅತಿರೇಕದ್ದು. ಕಳೆದ ಕೆಲವು ವರ್ಷಗಳಿಂದಲೂ ಇದಕ್ಕಾಗಿಯೇ ಸಂಗ್ರಹ ಮಾಡಹೊರಟ ಪಾಶ್ಚಾತ್ಯ ಮಹಿಳಾ ಚಳುವಳಿಗಾರರು ಗೃಹಕೃತ್ಯಕ್ಕೆ ಕೂಲಿ ಕೊಡಿಸುತ್ತೇವೆಂದು ಮಾನವೀಯ ಮೌಲ್ಯಕ್ಕೆ ಕೈಹಾಕಲಿದ್ದರು. ಗೃಹಕೃತ್ಯದ ಎಲ್ಲ ಕೆಲಸಗಳಿಗೆ ಕೂಲಿಯ ಹಣ ಸಿಗುವುದಾದರೆ 'ಮಡದಿ', 'ತಾಯಿ'ಯರ ಅವಶ್ಯಕತೆಯಿಲ್ಲದಂತಾಗಿ ಎಲ್ಲ ಮಾನವೀಯ ಸಂಬಂಧಗಳು ಕೊಂಡುಕೊಳ್ಳುವ ವ್ಯವಹಾರವಾಗುವುದರಲ್ಲಿ ಸಂಶಯವಿಲ್ಲ. ಮಾನವ ಸಂಬಂಧಗಳನ್ನು ವ್ಯಾಪಾರೀಕರಣಕ್ಕೆ ಒಳಪಡಿಸುವುದರಲ್ಲಿ ಇದಕ್ಕಿಂತಲೂ ಸ್ತ್ರೀ-ಪುರುಷರಿಬ್ಬರಿಗೂ ಮನೆಗೆಲಸವನ್ನು ಸಮಸಮವಾಗಿ ಹಂಚಿಕೊಳ್ಳಬಲ್ಲಂತಹ ಮಾನಸಿಕ ಸಿದ್ಧತೆ ಮತ್ತು ಅದಕ್ಕೆ ತಕ್ಕ ವಾತಾವರಣವನ್ನು ಗೃಹಚಾಕರಿಗೆ ತಮ್ಮನ್ನು ಒಗ್ಗಿಸಿಕೊಳ್ಳದ ಪುರುಷ ಸಮುದಾಯವನ್ನು ಈ ಸಿದ್ಧತೆಯತ್ತ ಬಗ್ಗಿಸುವ ಕೆಲಸ ಆಗಬೇಕಾಗಿದೆ. ಅಂತಹ ಸಂದರ್ಭದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕ ಸಂಘಟನೆಯಲ್ಲಿ ತೊಡಗುವ ಸನ್ನಿವೇಶ ಒದಗುತ್ತದೆ.

ನಮ್ಮ ಹೆಮ್ಮೆಯ ಪ್ರಜಾ ಪ್ರತಿನಿಧಿಗಳು

ಗೌರಮ್ಮ

ಅಲ್ಲೊಂದು ಗುಂಪು ಚರ್ಚೆ ನಡೆಯುತ್ತಿತ್ತು, ಸಂದರ್ಭ 2003ರ ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ನಡೆದ ಮಹಿಳಾ ಚುನಾಯಿತ ಪಂಚಾಯತ್‌ನ ರಾಜಕಾರಣಿಗಳ ರಾಜ್ಯ ಸಮಾವೇಶ. ಆ ಗುಂಪಿನಲ್ಲಿ ಎಪ್ಪತ್ತು ದಾಟಿದ. ಆಕರ್ಷಕ ಮುಖಭಾವದ ವೃದ್ಧೆಯೊಬ್ಬಳು ಸ್ವಲ್ಪವೂ ಸಂಕೋಚವಿಲ್ಲದೆ ಗಟ್ಟಿಧ್ವನಿಯಲ್ಲಿ ಸ್ವರವೆತ್ತಿ ಮಾತನಾಡುತ್ತಿದ್ದಳು. ಅವಳ ಮಾತಿನ ಗತ್ತು ಮತ್ತು ವಿಷಯ ನನ್ನಲ್ಲಿ ಕುತೂಹಲ ಹುಟ್ಟಿಸಿತು. ಚರ್ಚೆಯೆಲ್ಲಾ ಮುಗಿದು, ಊಟದ ನಂತರ ವಿಶ್ರಮಿಸಿಕೊಂಡು ಕುಳಿತಿದ್ದ ಆಕೆಯ ಬಳಿ ಹೋಗಿ ಮಾತನಾಡಿಸಿದೆ. ಆಕೆಯತ್ತ ಪ್ರಶ್ನೆಯೊಂದನ್ನು ಎಸೆದರೆ ಸಾಕು, ಉತ್ತರ ಅಡೆತಡೆಯಿಲ್ಲದೆ ಪ್ರವಾಹದಂತೆ ಹೊರಬೀಳುತ್ತಿತ್ತು ನನ್ನ ಹೆಸರು ಗೌರಮ್ಮ ಕಣಮ್ಮ. ರಾಮಕೃಷ್ಣ ಹೆಗಡೆಯವರ ಕಾಲದಲ್ಲೇ ನಾನು ಮಂಡಲ ಪಂಚಾಯಿತಿಯಲ್ಲಿದ್ದೆ. ನಾನು ಗೌರಮ್ಮನವರ ಮಾತಿನ ವೇಗಕ್ಕೆ ಬ್ರೇಕ್ ಹಾಕಿ ನನ್ನ ಕೆಲವೊಂದು ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡೆ

ಈ ಎಪ್ಪತ್ತು ದಾಟಿರುವ ಗೌರಮ್ಮ ಹತ್ತು ವರ್ಷಗಳ ಹಿಂದೆ ಮಹಿಳಾ ಮೀಸಲಾತಿಯ ಆಧಾರದ ಮೇಲೆ ಬೈಲುಕೊಪ್ಪದ ಮಂಡಲ ಪಂಚಾಯತಿಗಾಗಿ ಆಯ್ಕೆಯಾದವರು. ತೀವ್ರಸ್ಪರ್ಧೆಯಿಲ್ಲದೆ ಸರ್ವಾನುಮತದಿಂದ ಆಯ್ಕೆಯಾದ ಈಕೆಗೆ ಜನಬೆಂಬಲ ಬಹಳ.

ನಿರಕ್ಷರಕುಕ್ಷಿ ಪಂಚಾಯತಿ ಸದಸ್ಯೆಯಾದ ಮೇಲೆಯೇ ತನ್ನ ಸಹಿ ಮಾಡಲು ಕಲಿತದ್ದು. ಏಳು ಹೆಣ್ಣು ಮತ್ತು ಐದು ಗಂಡು ಮಕ್ಕಳ ತಾಯಿಯಾದ ಈ ಮಹಾಮಾತೆಗೆ ಎಲ್ಲ ಮಕ್ಕಳಿಗೂ ವಿದ್ಯಾಭ್ಯಾಸ ಕೊಡಿಸಿಲ್ಲ. ಎಂಬುದರ ಬಗ್ಗೆ

ಬೇಸರವಿದೆ. ಆದರೆ ಈಗ ಮೊಮ್ಮಕ್ಕಳೆಲ್ಲಾ ವಿದ್ಯಾವಂತರಾಗಿದ್ದಾರೆ, ಎಂಬುದನ್ನು ಹೇಳುವಾಗ ಅವರ ಕಣ್ಣಿನಲ್ಲಿ ಹೊಳಪು ಕಾಣಿಸುತ್ತದೆ.

ಎಲ್ಲ ಮಕ್ಕಳಿಗೆ ವಿದ್ಯಾಭ್ಯಾಸ ಯಾಕೆ ಕೊಡಿಸಿಲ್ಲ, ಎಂದು ಪ್ರಶ್ನಿಸಿದರೆ, ಇಲ್ಲ ಕಣಮ್ಮ, ಆಗ ನಾವು ತುಂಬ ಅವರ ಪರಿಸ್ಥಿತಿ ಹೇಗೆ ಸುಧಾರಿಸಿದೆ ಎನ್ನುವ ಕುತೂಹಲದಿಂದ ಪ್ರಶ್ನಿಸಿದಾಗ, ನೋಡಮ್ಮ, ಹಿಂದೆನಾವು ಬೇರೆಯವರ ಹೊಲದಲ್ಲಿ ಹೋಗಿ ಗೆಯ್ಯುತ್ತಿದ್ವಿ, ಸಾಕಷ್ಟು ಕೂಲಿ ಸಿಗುತ್ತಿರಲಿಲ್ಲ. ನಮ್ಮ ಕಣ್ಣೆದುರಿಗೇ ಆ ಪರದೇಶದವರಿಗೆ, ಟಿಬೇಟನ್ನರಿಗೆ ಸರ್ಕಾರ ಭೂಮಿ, ಕಾಣಿಕೆ ಕೊಡೋದು ನ್ಯಾಯನಾ ಏನು ಮಾಡಿದ್ವಿ ಗೊತ್ತಾ? ನಾವು ಒಂದು ಹತ್ತು ಮನೆಯವ್ರು ನಮ್ಮ ಹಳ್ಳಿ ಹತ್ತಿರದ ಕಾಡಿಗೆ ಹೋಗಿ ಗುಡ್ಲು ಹಾಕಿಕೊಂಡು ಕುತ್ತುಬಿಟ್ವಿ. ಸುತ್ತಮುತ್ತ ಇದ್ದ ಭೂಮಿಯಲ್ಲೇ ಗೆಯ್ಮೇ ಮಾಡಿಕೊಂಡು ಇದ್ವಿ. ಆದ್ಯವಾನೋ ಬರ್ತಾನೋ ಬರ್ಲೀ, ನಮ್ಮನ್ನು ಎಬ್ಬಿಸೋಕೆ ಅಂತ ಸುಮ್ಮನಿದ್ವಿ, ಪೊಲೀಸ್‌ನೋರ್ ಬಂದ್ರು ಸರ್ಕಾರದೋವ್ರು ಬಂದ್ರು ನಾವು ಯಾವುದಕ್ಕೂ ಹೆದರಲಿಲ್ಲ. ಹೋರಾಟ ಮಾಡಿದ್ವೀ, ಸುಮಾರು 6–7 ವರ್ಷ ಆ ಜಾಗ ಬಿಟ್ಟು ಕದಲಲ್ಲಿಲ್ಲ. ಈಗ ನಮ್ಮೋರು ಒಂದು ಎಂಟು ಮನೆಯವರಿಗೆ ಅಲ್ಲಿ ಜಾಗ ಸಿಕಿದೆ. ಉಳೋಕೆ ಭೂಮಿ ಸಿಕ್ಕದೆ.

ಸರ್ಕಾರದ ಕಛೇರೀಲಿ ನಮ್ಮ ಹೆಸರು ರಿಜಿಸ್ಟರ್ ಆಗಿದೆ – ಎಂದು ತಮ್ಮ ಹೋರಾಟದ ಕತೆಯನ್ನು ಅಭಿಮಾನದಿಂದ ಗೌರಮ್ಮ ಹೇಳುವಾಗ ಎಂತಹವರಿಗೂ ಆಕೆಯ ಸಾಮರ್ಥ್ಯದ ಬಗ್ಗೆ ಹೆಮ್ಮೆ ಎನಿಸದೆ ಇರದು.

ಅಕ್ಷರ ಜ್ಞಾನವಿಲ್ಲದ ಈಕೆ ಪಂಚಾಯಿತಿಯಲ್ಲಿ ಹೇಗೆ ಕಾರ್ಯ ನಿರ್ವಹಿಸಿರಬಹುದು ಎಂಬ ಕುತೂಹಲದಿಂದ ವಿವರಗಳಿಗಾಗಿ ಪ್ರಶ್ನಿಸಿದಾಗ, ಅವರ ವ್ಯವಹಾರಿಕ ಜ್ಞಾನ ತಲೆತೂಗುವಂತೆ ಮಾಡುತ್ತದೆ. ನಾನು ಸದಸ್ಯೆ ಆದ ಮೇಲೆ ರಸ್ತೆ ಮಾಡಿಸಿವ್ನಿ, ಕರೆಂಟು, ನಲ್ಲಿ, ಹಾಕಿಸಿವ್ನಿ, ಈಗ ಏಳನೇ ಕ್ಲಾಸ್‌ವರೆಗೆ ಇಸ್ಕೂಲು ಬಂದೈತೇ ಇನ್ನು ನಮ್ಮೂರಿಗೆ ಬೇಕಾಗಿರುವುದು ಒಂದು ಬಸ್ಸು ಮತ್ತು ಹಾಲಿನ ಡೈರಿ, ಎಂದು ಹೇಳುವಾಗ ಅವರ ಹಳ್ಳಿಯ ಚಿತ್ರ ನಮ್ಮ ಕಣ್ಣ ಮುಂದೆ ಬಿಚ್ಚಿಕೊಳ್ಳುತ್ತದೆ. ಅವರ ಸಾಧನೆಯ ಪಟ್ಟಿ ಅಷ್ಟಕ್ಕೆ ನಿಲ್ಲುವುದಿಲ್ಲ ಒಂದು ಬಸವೇಶ್ವರನ ದೇವಸ್ಥಾನ ಕಟ್ಟಿಸಿದೆ ಕಣಮ್ಮ. ಕೆಲವು ಜನರು ಬಂದು ಅದನ್ನು ರಾಮರ ದೇವಸ್ಥಾನ ಮಾಡಬೇಕೆಂದು ಹೇಳಿದ್ರು. ನಾನು ಅದನ್ನು ಆಗೋಕೆ ಬಿಡಲಿಲ್ಲ. ಆ ದೇವಸ್ಥಾನದಲ್ಲಿ ನನ್ನ ಹೆಸರು ಹಾಕ ಬೇಕು ಅಂತ ಊರ ಜನ ಅದ್ರು. ನಾನು ಬೇಡ ಅಂದೆ ಹಾಗೆಯೇ ನಮ್ಮ ಊರಿಗೆ 'ಗೌರಿ ಪುರ' ಅನ್ನೋ ಹೆಸರು ಮಡ್ಗಬೇಕು ಅಂದ್ರು, ನಾನು ಒಪ್ಪಿಲ್ಲ ಕಣಮ್ಮ 'ಶಾಂತಿ ನಗರ' ಹೆಸರಿಡಿಸಿವ್ನಿ .

ಗೌರಮ್ಮನವರ ಕಾರ್ಯವೈಖರಿಯನ್ನು ಅವರ ಬಾಯಿಯಿಂದಲೇ ಕೇಳಬೇಕು. ಅವರೂರಿನ ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಂಡು, ತಾಲ್ಲೂಕು, ಜಿಲ್ಲಾ ಕಛೇರಿಗಳಿಗೆ, ಕೊನೆಗೆ ಬೆಂಗಳೂರಿನ ವಿಧಾನ ಸೌದಕ್ಕೂ ಅಲೆಯುವ ಛಾತಿ ಇರುವ ಆಕೆಗೆ ಬಸ್ಸಿನ ಬೋರ್ಡು ಓದಲು ಬರುವುದಿಲ್ಲ.

ಯಾವ ಕಛೇರಿಯ ಯಾವ ಆಫೀಸರನ್ನುಗಳನ್ನಾದರೂ ಧೈರ್ಯದಿಂದ ಮಾತನಾಡಿಸಬಲ್ಲ ಆಕೆಗೆ ಹೆದರಿಕೆ ಎಂಬುದೇ ಇಲ್ಲ. ಮನೆಯಲ್ಲಿರುವ ಕಲಿತ ಹುಡುಗರ ಕೈಯಲ್ಲಿ ಅರ್ಜಿ ಬರೆಸಿಕೊಂಡು ಕಛೇರಿಗಳಿಗೆಲ್ಲಾ ಧೈರ್ಯದಿಂದ ಸುತ್ತಿ ಹಲವಾರು ಮಂದಿಯ ಕೆಲಸ ಮಾಡಿಕೊಟ್ಟಿರುವ ಗೌರಮ್ಮ ಅವರ ಊರಿನ ಅತ್ಯಂತ ಜನಪ್ರಿಯ ವ್ಯಕ್ತಿ ಒಂದು ಟರ್ಮಿಗೆ ಮಂಡಲ ಪಂಚಾಯಿತಿಯ ಸಾಮಾನ್ಯ ಸದಸ್ಯೆಯಾಗಿದ್ದ ಈಕೆ ಮುಂದಿನ ಟರ್ಮಿಗೆ ಬೇರೆಯವರನ್ನು ಬಿಟ್ಟುಕೊಡು ಎಂದೊಡನೆ ತನ್ನ ಸ್ಥಾನ ಬಿಟ್ಟಿಕೊಟ್ಟಿರುವ ಧಾರಾಳಿ.

ಅಧಿಕಾರವಿಲ್ಲದಿದ್ದರೂ ಇದ್ದಾಗ ನಿರ್ವಹಿಸುತ್ತದಂತೆಯೇ ಈಗಲೂ ಕೆಲಸ ಮಾಡುವ ಈಕೆ ನಿವೃತಿಯೇ ಇಲ್ಲದವಳು.

ಈ ಸಭೆ, ಸಮಾರಂಭಗಳಿಗೆ ಹೇಗೆ ಓಡಾಡುತ್ತಿರಾ? ಯಾರು ನಿಮ್ಮನ್ನು ಕೆರದುಕೊಂಡು ಬರುತ್ತಾರೆ? ಎಂದು ಪ್ರಶ್ನಿಸಿದಾಗ, ನನಗೆ ಯಾರ ಜೊತೆಯೂ ಬೇಡ. ಏನು ಹೆದರಿಕೆ? ಒಬ್ಬಳೇ ಓಡಾಡುವೆ. ಹೋಗಬೇಕಾದ ಜಾಗದ ಅಡ್ರಸ್ ಒಂದು ಚೀಟಿ ಬರೆಸಿಟ್ಟಿಕೊಂಡಿರುವೆ. ಬಸ್ಸಿನಿಂದ ಇಳಿದು ನಿಮ್ಮಂತಹವರನ್ನು ಹೇಗೆ ಹೋಗುವುದು? ಎಂದು ಕೇಳ್ತಿನೀ. ನನಗೇನು ಬಾಯಿ, ಚುರುಡಾ? ಎಂದು ಪಾಟಿ ಸಾವಲು ಹಾಕುವ ಅವಳ ಠೀವಿಗೆ ಪ್ರಶ್ನೆ ಕೇಳಿದ ನನ್ನ ಬಾಯಿ ಮುಚ್ಚಿತು. ಗೌರಮ್ಮ ನಂತ ಮಹಿಳೆಯರಿಗೆ ಅಕ್ಷರದ ಹಸ್ತ್ರವೂ ಕೈಗೆ ಸಿಕ್ಕಿದರೆ ಭಾರತದ ರಾಜಕೀಯ ಗತಿ ಎತ್ತಾ ಸಾಗಬಹುದು?

ಲಲಿತಾ ಸೈನಿ

ಭಾರತದ ಭೂಪಟದಲ್ಲಿ ರಾಜಸ್ಥಾನದ ದೇವರಾಲ ಕಪ್ಪು ಚುಕ್ಕೆ ಹೊಂದಿದ ಗ್ರಾಮ 1986 ರಲ್ಲಿ ಸತಿಯ ಹೆಸರಿನಲ್ಲಿ ಪತಿಯ ಚಿತೆಯೊಡನೆ ಜೀವಂತ ಹೆಣ್ಣು ಮಗಳೂ ರೂಪ್ ಕಣ್ವರಳನ್ನು ಅಗ್ನಿಗೆ ಆಹುತಿಮಾಡಿ ಕುಪ್ರಸಿದ್ಧವಾಗಿ ಜನಮನದಲ್ಲಿ ನೆಲೆನಿಂತ ಹಳ್ಳಿ. ಇಂತಹ ಸ್ಥಳದಲ್ಲಿ 12 ವರ್ಷಗಳ ನಂತರ ಬರವಸೆಯ ಬೆಳಕಾಗಿ ಬಂದವಳು ಸರಪಂಚ್‌ಲಲಿತಾಸೈನಿ.

1996 ರಲ್ಲಿ ಪಂಚಾಯತ್ ಚುನಾವಣೆ ನಡೆದಾಗ ದೇವರಾಲ ಮಹಿಳಾ ಮೀಸಲಾತಿ ಕ್ಷೇತ್ರವಾಗಿತ್ತು. ವಿದ್ಯಾವಂತೆಯಾಗಿದ್ದ ಲಲಿತಾ ಸೈನಿಗೆ ಅವಳ ಕುಟುಂಬವೂ ಚುನಾವಣೆಗೆ ಸ್ಪರ್ದಿಸಲು ಒತ್ತಡ ತಂದಿತು. ಅಲ್ಲಿವರೆಗೂ ಮಾವ ಸ್ಪರ್ದಿಸುತ್ತಿದ್ದ ಸ್ಥಾನಕ್ಕೆ ಸೊಸೆ ಸ್ಪರ್ಧಿಯಾಗಿ ನಿಂತಳು. ವಿಜಯಿಯೂ ಆದಳು. ಅವಳ ವಿದ್ಯಾವಂತೆ ಆದ್ದರಿಂದ ಅವಳಿಗೆ 'ಸರಪಂಚ್' ಸ್ಥಾನ ಅನಾಯಸವಾಗಿ ಒಲಿದು ಬಂದಿತು.

ಪೊಲೀಸ್ ನೌಕರಿಯಲಿದ್ದ ಲಲಿತಾಳ ಗಂಡ ಇವೆಲ್ಲದರಿಂದ ದೂರವೆ ಉಳಿದಿದ್ದ. ಮಾವ ಮಾತ್ರ ಊರಿನ ಇತರ ಗಂಡಸರೊಂದಿಗೆ ಪಂಚಾಯತ್ ಕೆಲಸಗಳನ್ನು ರಾಜಕೀಯವನ್ನು ಚರ್ಚೆ ಮಾಡುತ್ತಿದ್ದ ಆರಂಭದಲ್ಲಿ ಎಂದಿನಂತೆಯೇ ಮುಖ ಕಾಣದಂತೆ ಮುಸುಕು ಹಾಕಿ, ಮನೆಯ ಇತರ ಹೆಂಗಸರ ಜೊತೆ ಅಡಿಗೆ–ಕಸ–ಮುಸುರೆ ಕೆಲಸ ಮಾಡುತ್ತಾ, ಮಕ್ಕಳನ್ನು ಸಾಕುತ್ತಾ ಇದ್ದವಳು ತನ್ನ ಸ್ಥಾನಮಾನ ಮತ್ತು ಪರಿಸ್ಥಿತಿಯ ಅಗತ್ಯವನ್ನು ನಿಧಾನವಾಗಿ ಅರ್ಥ ಮಾಡಿಕೊಂಡಳು.

ಮನೆಯಿಂದ ಹೊರಗೆ ಬಂದಳು. ಮುಖ ಮುಚ್ಚಿದ ಮುಸುಕು ತಲೆಯ ಮೇಲೆ ಕೂತಿತ್ತು. ಬಗಲಿಗೆ ಚೀಲ, ಕೈಗಳಲ್ಲಿ ಕಡತಗಳು, ಆತ್ಮ ವಿಶ್ವಾಸದಿಂದ ತುಂಬಿದ ಮುಖ ಸರಪಂಚ್ ಲಲಿತಾ ಸೈನಿಯನ್ನು ಆವರಿಸಿದ್ದವು. ಅಡಿಗೆ ಮನೆಯಿಂದ ಅವಳ ಕಾರ್ಯ ಕ್ಷೇತ್ರ ಹಳ್ಳಿಗೆ ವಿಸ್ತರಿಸಿತು. ಅವಳ ಮಾವ ಕೂಡ ಅವಳನ್ನು ಹಾಸ್ಯದಿಂದ 'ಸರಪಂಚ್ ಸಾಹೇಬ್' ಎಂದು ಕರೆಯ ತೊಡಗಿದ

ಲಲಿತಾ ನಿತ್ಯ ಪಂಚಾಯತ್ ಕಛೇರಿಗೆ ಬೇಟಿ ನೀಡುತ್ತಿದ್ದಳು. ರಸ್ತೆ ರಿಪೇರಿ, ಕಟ್ಟಡ ನಿರ್ಮಾಣ, ಇತ್ಯಾದಿಗಳನ್ನು ಕುದ್ದಾಗಿ, ಉಸ್ತುವಾರಿ ಮಾಡುತ್ತಿದ್ದಳು. ತನ್ನ ಪಂಚಾಯಿತಿ ಸಹ ಸದಸ್ಯರ ಜೊತೆಗೂಡಿ ಎಲ್ಲರಿಗೂ ಪಡಿತರ ಚೀಟಿ ದೊರಕಿಸಲು ಚಳುವಳಿಯನ್ನೇ ಹೂಡಿದಳು. ಮಹಿಳೆಯರ ರಾಜಕೀಯ ಪ್ರವೇಶ ಪುರುಷ ಅಧಿಕಾರ ರಾಜಕಾರಣಕ್ಕೆ ಎಂತಹ ಪೆಟ್ಟು ನೀಡಿದೆ . ಎನ್ನುವುದನ್ನು ವಿಶ್ಲೇಸುವ ಲಲಿತಾ ಅವಳ
ಪ್ರಾಂತ್ಯದ ಶಾಸಕರು ಮಹಿಳೆಯರ ಮತ ಸೆಳೆಯುವುದು ಹೇಗೆ ಎಂಬುದನ್ನು ಅವಳೊಡನೆ ಚರ್ಚಿಸುವುದನ್ನು ನೆನಪಿಸಿಕೊಳ್ಳುತ್ತಾಳೆ.

ಸಮಕಾಲೀನ ಲೇಖಕಿಯರ ಸಾಹಿತ್ಯದಲ್ಲಿ ಹೆಣ್ಣನ್ನು ವಿವಿಧ ಬಂಧನಗಳಲ್ಲಿ ಸಿಲುಕಿಸಿ ಅವಳ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವಳನ್ನು ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ಮಾಡಲಾದ ಪ್ರಕ್ರಿಯೆಯೊಂದನ್ನು, ಅದರ ಬೆಳವಣಿಗೆಯನ್ನು ಹೆಣ್ಣಿನ ದಮನದ ವಿವಿಧ ಅಸ್ತ್ರಗಳನ್ನು ಹಾಗೂ ಸ್ವರೂಪಗಳನ್ನು ವಿಶ್ಲೇಶಿಸುವ ಸಾಹಿತ್ಯವನ್ನು ಕಾಣಬಹುದಾಗಿದೆ.

ಹಾಗೂ ಮಹಿಳೆಯ ಸಮಸ್ಯೆ ಹಾಗೂ ವಿಮೋಚನೆಯ ಹಾದಿಯನ್ನು ಐತಿಹಾಸಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕಂಡುಕೊಳ್ಳುವ ಪ್ರಮಾಣಿಕವಾಗಿ ಯತ್ನವನ್ನು ಮಾಡಿದ್ದಾರೆ ಡಾ॥ ಎನ್. ಗಾಯಿತ್ರಿರವರು .ಹೆಣ್ಣನ್ನು ಶಬ್ದಾಢಂಬರದಲ್ಲಿ ಆರಾಧಿಸಿ, ದೈವತ್ವಕ್ಕೆ ಏರಿಸುತ್ತಿದ್ದ ಸಂಸ್ಕೃತಿ ವಾಸ್ತವದಲ್ಲಿ ಅವಳಿಗೆ ಸಂಕೋಲೆಯನ್ನು ಬಿಗಿಸು ದನಿಯೆತ್ತದಂತೆ ಮಾಡಿ ತುಳಿದಿಟ್ಟಿದೆ. ಸಮಾಜದ ಅರ್ಧ ಭಾಗವನ್ನು ಈ ಹೆಣ್ಣಿನ ಇಂದಿನ ದುಸ್ಥಿಗೆ ಒಂದು ಚರಿತ್ರೆಯಲ್ಲಿ ಅರ್ಧಭಾಗ ಚರಿತ್ರೆಯಲ್ಲಿ ಅವಳ ಸ್ಥಾನಮಾನಗಳಿಗೆ ಕಾರಣವಾದ ಅಂದಿನ ಸಾಮಾಜಿಕ ಶಕ್ತಿಗಳ ಮತ್ತು ಅವುಗಳ ಬದಲಾವಣೆಯಿಂದುಟಾದ ಪರಿಣಾಮವನ್ನು ಕುರಿತ ಒಂದು ಕಿರುನೋಟ ಇಲ್ಲಿದೆ.

ಹೆಣ್ಣಿನ ಸಮಸ್ಯೆಗಳ ಉಗಮ ಮತ್ತು ಅವುಗಳ ವಿವಧ ಸ್ವರೂಪವನ್ನು ಅಧ್ಯಯನ ಮಾಡುವ, ಈ ಸಮಸ್ಯೆಗಳಿಗೆ ಕಾರಣವಾದ ಶಕ್ತಿಗಳನ್ನು ಗುರ್ತಿಸಿ ಅವುಗಳ ವಿರುದ್ಧ ಹೋರಾಡಲು ಬೇಕಾದ ಸಿದ್ಧಾಂತವನ್ನು ಅನ್ವೇಷಿಸುವ ಅಂಶಗಳನ್ನು ನೀಡಿದ್ದಾರೆ.

ಕೃಷ್ಣನಿಗೆ ಮೊರೆಯಿಟ್ಟ ದ್ರೌಪದಿಯಂತೆ, ರಾಮನಿಗೆ ಕಾಯುತ್ತಿದ್ದ ಅಹಲ್ಯೆಯಂತೆ ಇಂದು ಹೆಣ್ಣು ಯಾವ ಯುಗ ಪ್ರವರ್ತಕನಿಗೂ ಮೊರೆಯಿಡುವುದರಿಂದ ಪ್ರಯೋಜನವಿಲ್ಲ. ತನ್ನ ವಿಮೋಚನೆ ತನ್ನ ಕೈಯಲ್ಲೇ ಇದೆ ಎಂದು ಮನಗಂಡು ಸಂಗಟಿತ ಸ್ತ್ರೀ ಶಕ್ತಿಯನ್ನು ನೆಚ್ಚಿಕೊಳ್ಳಬೇಕು ಎಂಬ ಸಂದೇಶವನ್ನು ಡಾ॥ ಗಾಯಿತ್ರಿರವರು ನೀಡಿದ್ದಾರೆ.

ಎನ್ ಗಾಯಿತ್ರಿಯವರ ಸಾಹಿತ್ಯದ ಚಿಂತನೆ ಆಲೋಚನೆಯಲ್ಲಿ ಸಮಕಾಲೀನ ಲೇಖಕಿಯರ ಸಾಹಿತ್ಯದ ಜೊತೆ ತೌಲನಿಕ ಅಧ್ಯಯನ ನಡೆಸಿದಾಗ ನಾನು ಕಂಡಂತೆ ಭಿನ್ನತೆ ಏನೆಂದರೆ ಮಹಿಳೆಗೆ ಮೀಸಲಾತಿ ಕಲ್ಪಿಸಿಕೊಡುವ ಚಿಂತನೆ ಹಾಗೂ ರಾಜಕೀಯ ಬದುಕಿಗೆ ಹೇಗೆ ಮಹಿಳೆ ಕೂಡ ಪ್ರವೇಶಿಸುವ ಸಮಾನತೆ ಒದಗಿಸಿಕೊಡಬೇಕು, ಜೊತೆಗೆ ಉತ್ಕೃಷ್ಟ ಸಮಾನವಾಗಿ ದುಡಿಯುವ ಹಕ್ಕು ಹಾಗೂ ಭಾರತೀಯ ಸಂವಿಧಾನ ಮತ್ತು ಕಾನೂನು ಚೌಕಟ್ಟಿನಲ್ಲಿ ಹೆಣ್ಣಿನ ಹಕ್ಕು ಬಾಧ್ಯತೆಗಳನ್ನು ವಿವರಿಸುತ್ತಾ ಸಂಪ್ರದಾಯಿಕ ಚೌಕಟ್ಟಿನಲ್ಲಿ ಬೆಳೆದು ಅನೇಕ ಕಂದಾಚಾರಗಳನ್ನು ಪ್ರಶ್ನಿಸುವಂತಹ ಡಾ॥ ಎನ್ ಗಾಯಿತ್ರಿಯವರ ಒಟ್ಟಾರೆ ಲೇಖನಗಳಲ್ಲಿ ಕಾಣಬಹುದಾಗಿದೆ.

ಅಡಿ ಟಿಪ್ಪಣಿಗಳು

1. ರೊಟ್ಟಿ ಮತ್ತು ಹುಡುಗಿ – ಮಲ್ಲಿಕಾ ಘಂಟಿ– ಪುಟ –2
2. ಅಮೃತಮತಿಯ ಸ್ವಾಗತ – ಹೆಚ್.ಎಲ್. ಪುಷ್ಪ – ಪುಟ –3

ಅಧ್ಯಾಯ–5
ಸಮಾರೋಪ

ಅಧ್ಯಾಯ-5
ಸಮಾರೋಪ

"ನೋವು ಹಿಂಸೆ ತಾಳಿ ಕೊಂಡೆವು
ಕುಡಿತ ಹೊಡೆತ ಸಹಿಸಿ ಕೊಂಡೆವು
ಬೈಗುಳ ಅಪಮಾನದಲ್ಲಿ ದಸಿಹಿಕೊಂಡೆವು
ಸೀಮೆ ಎಣ್ಣೆ ಸುರಿದು ಬೆಂಕಿಯಿಟ್ಟಾಗ
ತಾಳದೆ ಝಳ ಕೂಗಿ ಕೊಂಡೆವು
ಆತ್ಮಗಳು ತಿರುಗಿ ನಿಂತು ಕೇಳಿದವು
ತಾಳೋದಂದ್ರೆ ಎಲ್ಲಿ ತನಕ"?

-(ತಿರುಗಿನಿಂತ ಆತ್ಮಗಳು)

ಎನ್ನುವ ಕವಿತೆಯಂತೆ ಹೆಣ್ಣು ತನ್ನೆಲ್ಲಾ ನೋವು ಅಪಮಾನ, ಶೋಷಣೆ, ಕೌರ್ಯವನ್ನು ಎಲ್ಲಿಯತನಕ ಸಹಿಸಿಕೊಳಲು ಸಾಧ್ಯ ಒಮ್ಮೆ ತಿರುಗಿ ನಿಲ್ಲಲೇಬೇಕಾದ ಅನಿವಾರ್ಯತೆ ಇದನ್ನೇ ಪ್ರತಿಭಟನೆ ಹೋರಾಟ ಎನ್ನುವ ನಿಟ್ಟಿನಲ್ಲಿ ಇಂದು ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾಳೆ.

ಇಂದು ಹೊಸ ಶತಮಾನದ ದಿನಗಳಲ್ಲಿ ಸ್ತ್ರೀ-ಪುರುಷರೆಂಬ ಅಭೇದದೊಳಗೂ ಒಂದೆಡೆ ಈ ಪುರುಷ ವರ್ಗ ಅವಳಿಗೆ ಎಲ್ಲಾ ಸೌಕರ್ಯ ಸವಲತ್ತುಗಳನ್ನು ನೀಡುವುದರೊಂದಿಗೆ ಸಮಾನ ಸ್ಥಾನವನ್ನು ಕಲ್ಪಿಸಿಕೊಟ್ಟಂತೆ ನಾಟಕವಾಡುತ್ತಿದೆ ಜೊತೆಗೆ ಅವಳನ್ನು ಉನ್ನತೀಕರಿಸಿದ ಮಟ್ಟದಲ್ಲೇ ದೌರ್ಜನ್ಯಕರಿಸುವ ಆಧುನಿಕ ರೀತಿಯ ಆತಂಕಗಳನ್ನು ಅವಳಿಗೆ ಉಚಿತ ವಂತಿಕೆಯಾಗಿ ನೀಡುತ್ತಿದೆ.

ಎನಿಸುತ್ತದೆ, ಬಾಹ್ಯವಾಗಿ ಅಲ್ಲದಿದ್ದರೂ ಆಂತರಿಕವಾಗಿ ಮಹಿಳೆ ದಿನದಿಂದ ದಿನಕ್ಕೆ ಆತಂಕದಲ್ಲೇ ಜೀವನ ಸಾಗಿಸುತ್ತಿದ್ದಾಳೆ. ಪಾವಿತ್ರ್ಯತೆ ನೀತಿ ಹೆಣ್ಣಿಗೆ ಮಾತ್ರ ಅನ್ವಯಿಸುತ್ತದೆಯೇ ಅದು ಹೆಣ್ಣಿನ ಚರ್ಮದಲ್ಲಿಯೇ? ಡಾ. ಎಚ್. ಎಸ್ ಅನುಪಮಾ ಅವರ ತಾತ್ವಿಕ ಪ್ರಶ್ನೆಯೂ ಆಗಿದೆ.

12 ನೇ ಶತಮಾನಕ್ಕಾಗಲೇ ಬಂದನಗಳಾಚೆಗಿನ ಬದುಕಿನ ಅಮೂರ್ತ ಚೆನ್ನಮಲ್ಲಿಕರ್ಜುನನ ಉಡುಕಾಟ, ನನ್ನ ಸಂಶೋಧನೆಯೂ ಹುಡುಕಾಟವೂ ಆಗಿದೆ. ಇಂತಹ ಪ್ರಗತಿಪರ ಧೋರಣೆಗಳು ಆಲೋಚನೆಗಳಲ್ಲಿ ಮಾತ್ರ ಉಳಿದು ಹೋಗುವುದೋ ನಿತ್ಯ ಬದುಕಿನ ಸ್ವೀಕರಣೆಯಾಗಿ ಬಂದಾಗ ಹೆಣ್ಣಿನ ಆಯ್ಕೆ ಯಾವುದು? ಡಾ॥ ಎನ್ ಗಾಯಿತ್ರಿಯವರ ಲೇಖನಗಳಲ್ಲಿ ಹೆಣ್ಣಿನ ದಿಟ್ಟ ಹೆಜ್ಜೆಗಳ ಗುರುತುಗಳಿವೆ 'ಸಹಿಷ್ಣುತೆ' ಲಕ್ಷಣ ಹೊರಗಿನಿಂದ ಬಂದ ಒತ್ತಾಯವಾಗದೆ ಅವಳ ಜಾಯಮಾನದ ಬೇರುಗಳಲ್ಲೇ ಅಡಗಿಹೋಗಿದೆಯೇ? ಕಡೆಗೆ ಸ್ತ್ರೀ ಅರ್ಥವಾಗದೇ ಪ್ರಶ್ನೆಯೇ ಆಗುತ್ತಾಳೆ ಪುರುಷನಷ್ಟೇ ಅಲ್ಲದೇ, ಸ್ತ್ರೀ ಕೂಡ ತಾನೇ ಏರ್ಪಡಿಸಿಕೊಂಡಿರುವ ವರ್ತುಲ ಬಂದಿದೆ ತನ್ನ ಅಸ್ತಿತ್ವಕ್ಕಾಗಿ ಅವಿರತ ಹೋರಾಟ ನಡೆಸುತ್ತಲೇ ಇದ್ದಾಳೆ

" ಈಗಲೂ ಇಲ್ಲಿ ಅದೇ ಕಥೆ
ನಡೆದಿದೆ ಸೀತೆ
ಬದಲೇನಾದರೂ ಆಗಿದ್ದರೆ
'ಸೀ' ಬದಲು 'ಗಿ' ಎಂಬುದಷ್ಟೆ

–(ಇದೇ ಕೂಗು ಮತ್ತೆ ಮತ್ತೆ)

ಈ ಕವಿತೆ ಉತ್ತಮ ಉದಾಹರಣೆಯಲ್ಲವೇ ಇದೇ ಆಧುನಿಕ ಸೀತೆಯರ ಕಥೆ ಇಂತಹ ಕಥೆಗಳಿಗೆ ಅಂತಿಮ ವಿಧಾಯವನ್ನು ನೀಡುವುದು ಹೇಗೆ? ಅದಕ್ಕೆ ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದುಕೊಳ್ಳುವುದು ಹೇಗೆಂದರೆ ಸ್ತ್ರೀ ತನ್ನಷ್ಟಕ್ಕೆ ತಾನೇ ತನಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಆತ್ಮಸ್ಥೈರ್ಯವನ್ನು ಪಡೆದುಕೊಂಡಾಗ ಮತ್ತು ತಾನೂ ಹೆಣ್ಣು ಎಂಬ ಕೀಳರಿಮೆಯನ್ನು ಕಿತ್ತೆಸೆದು ಸಮಾಜದ ದುಷ್ಟ ಶಕ್ತಿಗಳ ವಿರುದ್ಧ ವಿಮುಖವಾಗಿ ನಿಲ್ಲುವಂತಹ ಧೈರ್ಯವನ್ನು ಕಂಡುಕೊಂಡಾಗ ಮಾತ್ರ ಸಾಧ್ಯವಾಗುತ್ತದೆ.

ಎಲ್ಲಿಯವರೆಗೆ ಸ್ತ್ರೀ ತನ್ನನು ತಾನು ಶೋಷಣೆಗೆ, ಅವಮಾನಕ್ಕೆ ದೌರ್ಜನ್ಯಕ್ಕೆ ನಿಲ್ಲುವಳೋ ಅಲ್ಲಿಯವರೆಗೆ ಸ್ತ್ರೀಯರನ್ನು ಶೋಷಿಸುವ ಜನರಿರುತ್ತಾರೆ ಎಂಬುದು ಕಟುಸತ್ಯವಾಗಿದೆ.

ಅನುಬಂಧ

ಡಾ.ಎನ್ ಗಾಯಿತ್ರಿಯವರೊಡನೆ ಒಂದು ಸಂದರ್ಶನ

ಒಂದು ಲೇಖನ ಸಾಹಿತ್ಯವನ್ನು ಅರ್ಥೈಸಿಕೊಳ್ಳಲು ಲೇಖಕರ ಸ್ವಯಂ ಅಭಿಪ್ರಾಯಗಳನ್ನು ಗಮನಿಸಬೇಕಾಗುತ್ತದೆ ಲೇಖನಗಳನ್ನು ನಾವು ಓದಿದಾಗ ಕಂಡು ಬಂದ ವಿಚಾರಗಳು, ಲೇಖಕರ ಕಣ್ಣಿನಿಂದ ನೋಡುವುದಕ್ಕೂ ಒಂದು ಸೂಕ್ಷ್ಮ ಅಂತರ ಇದ್ದೇ ಇರುತ್ತದೆ ಲೇಖನಯೊಂದು ಸೃಜಿಸಿಟಂತೆ ಮಾಡಿದ ಒತ್ತಡ ಸ್ಫೂರ್ತಿ, ಅನುಭಾವಿತನ, ಲೇಖಕನದ್ದೇ ಸ್ವಂತದ್ದಾಗಿರುತ್ತದೆ. ಓದುಗನ ಮೇಲೆ ಭೀರುವ ಪರಿಣಾಮ ಇನ್ನೊಂದು ಬಧಿಯದು. ಕವಿಯ ಸ್ವಂತ ಚಿಂತನೆಗಳನ್ನು ಅವರ ಮಾತಿನಲ್ಲೇ ಕೇಳಿ ತಿಳಿದಾಗ, ಒಂದು ವಿಮರ್ಶೆಯ ಆಸಕ್ತಿ ಹೊರಳು ಮಾರ್ಗವನ್ನು ಹಿಡಿಯುತ್ತದೆ. ಮಹಿಳೆ ಬಿಡುಗಡೆಯ ಹಾದಿಯಲ್ಲಿ, ಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ ಲೇಖನಗಳನ್ನು ಓದಿದಾಗ ಡಾ॥ ಎನ್ ಗಾಯಿತ್ರಿಯವರ ಮೂಲ ಅಭಿಪ್ರಾಯಗಳನ್ನು ಕೇಳಲೇ ಬೇಕೆಂಬ ಕುತೂಹಲ ಉಂಟಾಯಿತು.

ಸಂಶೋಧಕಿ : ನಿಮ್ಮ ಅಭಿಪ್ರಾಯದಲ್ಲಿ ನೀವು ಶಿಕ್ಷಣ ಪಡೆಯುವಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಶಿಕ್ಷಣ ಮತ್ತು ನೀವು ಶಿಕ್ಷಣ ಪಡೆದ್ದಂತಹ ರೀತಿ–ನೀತಿ ಹೇಗಿತ್ತು?

ಲೇಖಕಿ: ಕೃಷಿಕ ಕುಟುಂಬದಿಂದ ಬಂದ ನಮ್ಮ ತಂದೆ ಓದಬೇಕೆಂಬ ಆಸೆ ಬಹಳ ಇಷ್ಟವಿತ್ತು. ಆದ್ದರಿಂದ ಅವರ ತಂದೆಯ ಇಚ್ಛೆಗೆ ವಿರುದ್ಧವಾಗಿ ಮೆಟ್ರಿಕ್ ಮುಗಿದ ಮೇಲೆ ಬೇಸಾಯ ಮಾಡಲು ಇಷ್ಟವಿಲ್ಲದೆ ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ಬಂದಿದ್ದರು. ಆಗ ಅವರಿಗೆ ಮದುವೆಯಾಗಿತ್ತು, ನಮ್ಮ ತಾಯಿಯೂ ಮೆಟ್ರಿಕ್ ಓದಿದ್ದು. ಪ್ರೈಮರಿ ಶಾಲೆಯ ಅಧ್ಯಾಪಕ ವೃತ್ತಿ ಮಾಡುತ್ತಾ ಜೊತೆ ಜೊತೆಗೆ ತಮ್ಮ ಓದನ್ನು ಮುಂದುವರೆಸಿದ್ದರು. ಅಪಾರ ಪುಸ್ತಕ ಪ್ರೇಮಿಯಾಗಿದ್ದರು . ಮನೆಯಲ್ಲಿ ದೊಡ್ಡ ಪುಸ್ತಕ ಭಂಡಾರವನ್ನೇ ಇಟ್ಟುಕೊಂಡಿದ್ದರು, 60ರ ದಶಕದಲ್ಲಿ ನಾನು ಶಾಲೆ ಸೇರಿದ್ದು. ಮನೆಯಲ್ಲಿ ಎಷ್ಟೇ ಬಡತನವಿದ್ದರೂ ನಮ್ಮ ವಿದ್ಯಾಭ್ಯಾಸಕ್ಕೆ

ಕೊರತೆಯೇನೂ ಮಾಡಲಿಲ್ಲ. ಬಹುಷಃ ಬೆಂಗಳೂರಿನಂತಹ ಪಟ್ಟಣದಲ್ಲಿದ್ದಕ್ಕೋ ಏನೋ ಓದುವುದಕ್ಕೆ ನನಗೆ ತೊಂದರೆಯೇನೂ ಆಗಲಿಲ್ಲ. ಮನೆಯ ಹಿರಿಯ ಮಗಳು ನಾನು. ಹಾಗಾಗಿ ನಾನೇ ಮೊದಲ ಪಧವೀಧರೆ ಕೂಡ. ಹಾಗೆಯೇ ಉದ್ಯೋಗಸ್ಥ ಮಹಿಳೆಯೂ ಕೂಡ. ನನಗೆ ಯಾವ ನಿದಿಷ್ಟ ಮಾದರಿಯೂ ನನಗೆ ಕಣ್ಣ ಮುಂದೆ ಇರಲಿಲ್ಲ. ಆದರೆ ಪಾಠದಲ್ಲಿ ಮುಂದಿದ್ದೆ. ಆಟದಲ್ಲಿ ಹಿಂದೆ.

ಸಂಶೋಧಕಿ: ವಿದ್ಯಾಬ್ಯಾಸದ ನಂತರ ನೀವು ಆಯ್ಕೆ ಮಾಡಿಕೊಂಡಂತಹ ಕ್ಷೇತ್ರ ಯಾವುದು?

ಲೇಖಕಿ: ನನಗೆ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಕೆಲಸವೊಂದನ್ನು ಹುಡುಕಿಕೊಳ್ಳಬೇನಿಸಿತ್ತು. ಮನೆಯ ಪರಿಸ್ಥಿತಿ ಹಾಗಿತ್ತು. ಯಾವುದೇ ಕೆಲಸವಾದರೂ ಸರಿ. ನಿದಿಷ್ಟ ಆಯ್ಕೆಯೇನೂ ಇರಲಿಲ್ಲ. ಹಾಗಾಗಿ ಕೆಲಸಕ್ಕೆ ಮನೆಯಿಂದಲೇ ಅರ್ಜಿ ಗುಜರಾಯಿಸಿ ನನ್ನ ಎಸ್.ಎಸ್.ಎಲ್.ಸಿ ಯ ಅಂಕಗಳ ಬಲದಿಂದ ಅಂಚೆ ಇಲಾಖೆಯಲ್ಲಿ ನೌಕರಿಗೆ ಸೇರಿದೆ. ಕೆಲಸ ಮಾಡುತ್ತಲೇ ಸಂಜೆ ಕಾಲೇಜಿನಲ್ಲಿ ಕನ್ನಡದಲ್ಲಿ ಎಂ.ಎ ಮುಂದುವರೆಸಿದೆ. ಎಂ.ಎ. ಮಾಡುತ್ತಿರುವಾಗಲೇ ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಉದ್ಯೋಗಕ್ಕಾಗಿ ಅರ್ಜಿ ಹಾಕಿ, ಕೆಲಸಕ್ಕೆ ಸೇರಿದೆ. ಇದು ಅನಿವಾರ್ಯತೆಯ ಫಲವೇ ಹೊರತು, ನನ್ನ ಆಯ್ಕೆಯ ಕ್ಷೇತ್ರ ಎಂದು ಹೇಳುವುದಕ್ಕಾಗುವುದಿಲ್ಲ.

ಸಂಶೋಧಕಿ: ಮಹಿಳಾ ಸಾಹಿತ್ಯದ ಆಸಕ್ತಿ ಬಗ್ಗೆ ಒಲವು ಮೂಡಿದ್ದು ಹೇಗೆ? ಯಾವ ಪ್ರೇರಣೆಯಿಂದ.

ಲೇಖಕಿ: ನನಗೆ ಮೊದಲು ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿಸಿದವರು ನನ್ನ ತಂದೆ. ಆ ಕಾರಣದಿಂದಲೇ ನಾನು ಕನ್ನಡ ಸಾಹಿತ್ಯದಲ್ಲಿ ಎಂ.ಎ ಮಾಡಿದ್ದು. ನಂತರ ನನ್ನ ಬೆಳವಣಿಗೆಯಲ್ಲಿ ಬಹುಪಾಲು ಕಾರಣರಾದವರು ನನ್ನ ಕಾಲೇಜು ಅಧ್ಯಾಪಕರು. ನಾನು ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟ ವೃತ್ತಿಯಲ್ಲಿ ತೊಡಗದಿದ್ದರೂ ಬರವಣಿಗೆ ಮತ್ತು ಭಾಷಣಗಳಿಗೆ ಅವಕಾಶ ಕಲ್ಪಿಸಿದವರು ನನ್ನ ಗುರುಗಳೇ. ವಿದ್ಯಾಭ್ಯಾಸ ಮುಗಿದ ಮೇಲೆ ನಾನು ಮಹಿಳಾ ಸಂಘಟನೆ ಮತ್ತು ಚಳುವಳಿಯಲ್ಲಿ ತೀವ್ರವಾಗಿ ತೊಡಗಿಕೊಂಡಿದ್ದೆ. ಇದರ ಭಾಗವಾಗಿ ನನಗೆ ಕರ್ನಾಟಕ ಲೇಖಕಿಯರ ಸಂಪರ್ಕಕ್ಕೆ ಬಂದೆ. ಸುಮಾರು 2 ಅವಧಿಗೆ ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡಿದೆ. ಆ ಕಾಲ ಘಟ್ಟದಲ್ಲಿ ನಾಡಿನ ಹಲವಾರು ಲೇಖಕ, ಲೇಖಕಿಯರೊಡನೆ ಒಡನಾಡುವ ಸದಾವಕಾಶ ಸಿಕ್ಕಿತು. ಈ ಸಂದರ್ಭದಲ್ಲಿ ಮಹಿಳಾ ಸಾಹಿತ್ಯ ನನ್ನನ್ನು ವಿಶೇಷವಾಗಿ ಆಕರ್ಷಿಸಿತು.


ಸಂಶೋಧಕಿ : ನೀವು ಬ್ಯಾಂಕಿನ ಉದ್ಯೋಗಿಯಾದರೂ ಮಹಿಳಾ ಲೇಖನಗಳನ್ನೇ ಬರೆಯುವುದರ ಉದೇಶ.

ಲೇಖಕಿ:ನನ್ನ ಬ್ಯಾಂಕಿನ ಉದ್ಯೋಗಕ್ಕೂ ಮಹಿಳಾ ಬರಹಕ್ಕೂ ಯಾವುದೇ ಸಂಬಂಧವಿಲ್ಲ. ಒಂದು ಹೊಟ್ಟೆ ಪಾಡಿಗಾಗಿ ಆಯ್ಕೆ ಮಾಡಿಕೊಂಡ ವೃತ್ತಿ. ಮತ್ತೊಂದು ಹವ್ಯಾಸ. ಆದರೆ ನಾನು ಬ್ಯಾಂಕಿನ ವಲಯದೊಳಗೂ ಮಹಿಳಾ ಸಂಬಂಧಿಯಾದ ಹಲವಾರು ಕಾರ್ಯಕ್ರಮಗಳನ್ನು ಮಾಡಿದ್ದೇನೆ. ಹಾಗೆಯೇ ನನ್ನ ಬರಹದ ಸಾಮರ್ಥ್ಯವನ್ನು ಬ್ಯಾಂಕಿನ ಹಣಕಾಸು ಸಾಕ್ಷರತಾ ಪ್ರಸಾರ ಕಾರ್ಯಕ್ರಮಕ್ಕೂ ಬಳಸಿಕೊಂಡಿದ್ದೇನೆ.

ಸಂಶೋಧಕಿ: ಮಹಿಳೆಯನ್ನೇ ಕುರಿತು ನಿಮ್ಮಲ್ಲಿ ಸ್ವತಃ ಅನುಭವದಿಂದ ಬಂದಿದ್ದ ಅಥವಾ ಜೀವನದ ಅನುಭವದಿಂದ ಬಂದಿರುವಂತಹದ್ದ.

ಲೇಖಕಿ:ಮಹಿಳಾ ಸಂಘಟನೆಯಲ್ಲಿ ಸಕ್ರಿಯವಾಗಿದ್ದಾಗ 'ಅಚಲ' ಎನ್ನುವ ಮಹಿಳಾ ಮಾಸಪತ್ರಿಕೆಯನ್ನು ನಮ್ಮ ಸಂಘಟನೆ ಆರಂಭಿಸಿದ್ದು, ನಾನು ಇದರ ಸಂಪಾದಕಿಯಾಗಿ ಕೆಲಸ ಮಾಡಿದ್ದೆ. 1985 ರಿಂದ 2007 ರವರೆಗೆ ಸುಮಾರು 22 ವರ್ಷಗಳ ಕಾಲ 'ಅಚಲ' ಪತ್ರಿಕೆಯ ಸಂಪಾದಕಿಯಾಗಿ ಕೆಲಸ ಮಾಡಿದೆ. ಈ ಆಸಕ್ತಿಯಿಂದಾಗಿಯೇ 2000 ರಿಂದ 2002 ರವರೆಗೆ ಅಂಚೆ ತೆರಪಿನ ಶಿಕ್ಷಣದ ಮೂಲಕ ' ಮಹಿಳಾ ಅಧ್ಯಯನ' ದಲ್ಲಿ ಎಂ.ಎ ಕೂಡ ಮಾಡಿದೆ.

ಆಕರ ಗ್ರಂಥಗಳು



ಪೂರಕ ಪಠ್ಯ ಗ್ರಂಥ

ಕೃತಿಗಳು	ಕರ್ತೃ	ಪ್ರಕಾಶನದ ಹೆಸರು	ವರ್ಷ
1. ಮಹಿಳೆ ಬಿಡುಗಡೆ ಹಾದಿಯಲ್ಲಿ	ಡಾ॥ ಎನ್.ಗಾಯಿತ್ರಿ	ನವಕರ್ನಾಟಕ ಪಬ್ಲಿಕೇಷನ್ಸ್	1996
2. ಸ್ತ್ರೀವಾದಿ ಪ್ರವೇಶಿಷಿಕೆ	ಡಾ.ಎನ್. ಗಾಯಿತ್ರಿ	ಕರ್ನಾಟಕ ಲೇಖಕಿಯರ ಸಂಘ	1995
3. ಮಹಿಳಾ ಮೀಸಲಾತಿ & ಲಿಂಗರಾಜಕಾರಣ	ಡಾ.ಎನ್. ಗಾಯಿತ್ರಿ	ಲಡಾಯಿ ಪ್ರಕಾಶನ	2012
4. ಮಹಿಳಾ ಚಳುವಳಿಯ ಮಜಲುಗಳು	ಡಾ.ಎನ್. ಗಾಯಿತ್ರಿ	ನವ ಕರ್ನಾಟಕ ಪ್ರಕಾಶಕರು	1998
5. ಸಂಚಲ	ಡಾ.ಎನ್. ಗಾಯಿತ್ರಿ	ಮಾಲೆ–ಪ್ರಕಾಶನ	2010

ಪರಾಮರ್ಶನ ಪತ್ರ

1. ಹೆಣ್ಣು ಸಂಕರ ಕಾಲದ ಆತ್ಮಪ್ರಜ್ಞೆ – ಡಾ. ಎಚ್.ಎಸ್ ಅನುಪಮಾ
2. ಪರಂಪರೆ – ಮಹಿಳಾ ಸಾಹಿತ್ಯ ಬಿಡಿ ಲೇಖನ
3. ದ ಸೆಕೆಂಡ್ ಸೆಕ್ಸ್ ಸಿಮೋನ್ ದ ಬೋವಾ
4. ಸ್ತ್ರೀ ಸಂಕಥಗಳು ಡಾ॥ ಅಣ್ಣಮ್ಮ
5. ನೂರೇಳನ ಅಂತರಂಗ ಕೆ.ಷರಿಫಾ
6. ಮಹಿಳಾ ಅಧ್ಯಯನ ನೇಮಿಚಂದ್ರ
7. ವಿಮುಕ್ತೆಯ ಹಾದಿ ಡಾ॥ ಬಿ.ಎನ್ ಸುಮಿತ್ರಾ ಬಾಯಿ, ಡಾ॥ ಎನ್. ಗಾಯಿತ್ರಿ
8. ಅಡ್ಡಗೋಡೆಗಳನೋಡೆದು ಅನುವಾದ ಪಾರ್ವತಿ ಮೆನನ್‌ರವರ ಕನ್ನಕ್ಕೆ ಡಾ॥ ಎನ್ ಗಾಯಿತ್ರಿ
9. The Vyage Out ವರ್ಜೀನಿಯಾ ವುಲ್ಫ್
10. ಕ್ಲಾರಾ ಜೆಟ್ಕಿನ್ ಡಾ॥ ಎನ್. ಗಾಯಿತ್ರಿ

ಹಂಪಿ ಕನ್ನಡ ವಿಶ್ವವಿದ್ಯಾಲಯ

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

ವಿಷಯ: ಡಾ.ಎನ್ ಗಾಯಿತ್ರಿಯವರ ಸಾಹಿತ್ಯದಲ್ಲಿ ಮಹಿಳಾ ಚಿಂತನೆ

ಸಂಶೋಧನಾ ವಿದ್ಯಾರ್ಥಿ

ವಿನೋದ

ಹಂಪಿ ವಿಶ್ವವಿದ್ಯಾಲಯ

(ರಿ. ನಂ: 172001030041)

ಮಾರ್ಗದರ್ಶಕರು

ಡಾ॥ ಹನುಮಂತರಾಯಪ್ಪ .ಎಚ್

ಕನ್ನಡ ಸಹ ಪ್ರಾಧ್ಯಾಪಕರು

ಸರ್ಕಾರಿ ಕಲಾ ಕಾಲೇಜು, ಬೆಂಗಳೂರು

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು,

'ಸಂಶೋದನಾ ಕೇಂದ್ರ',

ಚಾಮರಾಜಪೇಟೆ, ಬೆಂಗಳೂರು–560 018.

2017–2018